ಕರ್ನಾಟಕ ಸರ್ಕಾರ

## ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಮೈಸೂರು

## 2016–17ನೇ ಸಾಲಿನ

# ವಾರ್ಷಿಕ ವರದಿ







**ಡಾ: ಎನ್. ಮಂಜುಳ ಭಾ.ಆ.ಸೇ.,**

ಆಯುಕ್ತರು

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ

ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣ,

ದೊಡ್ಡಕೆರೆ ಮೈದಾನ, ಮೈಸೂರು– 570010

# ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ. ಮೈಸೂರು

## 2016–17ನೇ ಸಾಲಿನ ವಾರ್ಷಿಕ ವರದಿ

ಪ್ರಾಸ್ತಾವಿಕ :

1885ರಲ್ಲಿ ಅಸ್ತಿತ್ವಕ್ಕೆ ಬಂದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ಜೊತೆ 2004ರಲ್ಲಿ ಅಸ್ತಿತ್ವಕ್ಕೆ ಬಂದ ಪರಂಪರೆ ಇಲಾಖೆಯನ್ನು ಸರ್ಕಾರಿ ಆದೇಶದ ಸಂಖ್ಯೆ: **ಕಸಂವಾಪ್ರ 10 ಕೆಎಂಯು 2012 ದಿನಾಂಕ 23–2–2012ರಲ್ಲಿ ವಿಲೀನಗೊಳಿಸಿ** ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯನ್ನು ಪುನರ್ ರಚಿಸಿ ಆಯುಕ್ತರನ್ನು ಇಲಾಖೆಯ ಮುಖ್ಯಸ್ಥರನ್ನಾಗಿ ನೇಮಿಸಲಾಗಿದೆ.

ಸರ್ಕಾರದ ಆದೇಶದ ಸಂಖ್ಯೆ:ಕಸಂವಾ 234 ಕೆಎಂಯು 2014 ದಿನಾಂಕ:13.03.2015ರಲ್ಲಿ ಪ್ರಾಚ್ಯವಸ್ತು, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ (Archaeology, Museums and Heritage Department) ಎಂದು ಮರು ನಾಮಕರಣ ಮಾಡಿ ಆದೇಶಿಸಿದೆ.

ಪ್ರಸ್ತುತ ಇಲಾಖೆಯ ಕೇಂದ್ರ ಕಛೇರಿಯು ಮೈಸೂರಿನಲ್ಲಿದ್ದು **ಕಲೆ ಮತ್ತು ಸಂಸ್ಕೃತಿಗೆ** ಸಂಬಂಧಿಸಿದ **ಯೋಜನೆ** ಮತ್ತು **ಯೋಜನೇತರ** ಶೀರ್ಷಿಕೆ ಅಡಿಯಲ್ಲಿ ಇಲಾಖೆಯ ಕಾರ್ಯಕ್ರಮಗಳನ್ನು ಮುಂದುವರಿಸಿಕೊಂಡು ಬರುತ್ತಿದೆ.

ಈ ಇಲಾಖೆಯ ಮೂಲಭೂತ ಕಾರ್ಯ ಚಟುವಟಿಕೆಗಳೆಂದರೆ ಅನ್ವೇಷಣೆ, ಉತ್ಖನನ, ಪ್ರಾಚೀನ ಸ್ಮಾರಕಗಳ ಸಂರಕ್ಷಣೆ, ಶಾಸನಗಳ ಸರ್ವೇಕ್ಷಣೆ, ಪ್ರಾಚೀನ ನಾಣ್ಯಗಳ ಅಧ್ಯಯನ, ಸಂಶೋಧನಾ ಗ್ರಂಥಗಳ ಪ್ರಕಟಣೆ, ವಸ್ತುಸಂಗ್ರಹಾಲಯಗಳ ನಿರ್ವಹಣೆ ಹಾಗೂ ಅಭಿವೃದ್ಧಿ ಮತ್ತು ಪರಂಪರೆ ಕಾರ್ಯ ಚಟುವಟಿಕೆಗಳು, ಶೈಕ್ಷಣಿಕ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ರೂಪಿಸಿ ಯಶಸ್ವಿಯಾಗಿ ಅನುಷ್ಠಾನಗೊಳಿಸುತ್ತಿದೆ ಹಾಗೂ ಅವಜ್ಞೆಗೆ ತುತ್ತಾಗಿರುವ ಅಮೂಲ್ಯವಾದ ಪುರಾತನ ಶಿಲ್ಪಗಳು, ಪ್ರಾಚೀನ ಶಿಲಾಶಾಸನಗಳು, ನಾಣ್ಯಗಳು, ತಾಮ್ರ ಪಟಗಳು ಮುಂತಾದವುಗಳನ್ನು ಇಲಾಖೆಯ ವಸ್ತುಸಂಗ್ರಹಾಲಯದಲ್ಲಿ ಸಂಗ್ರಹಿಸಿ ಅವುಗಳನ್ನು ಮುಂದಿನ ಪೀಳಿಗೆಗೆ ಸಂರಕ್ಷಿಸುವ ಜವಾಬ್ದಾರಿಯನ್ನು ಸಹ ಇಲಾಖೆಯು ನಿರ್ವಹಿಸುತ್ತಿದೆ.

ಐತಿಹಾಸಿಕ ಹಿನ್ನೆಲೆಯುಳ್ಳ ಮೈಸೂರು, ಶ್ರೀರಂಗಪಟ್ಟಣ, ಬೀದರ್, ಗುಲ್ಬರ್ಗಾ, ಬಿಜಾಪುರ ಹಾಗೂ ಕಿತ್ತೂರು ಸೇರಿದಂತೆ ಒಟ್ಟು ಆರು ಸ್ಥಳಗಳನ್ನು 2004ರಲ್ಲಿ ಮತ್ತು 2012–13ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಸನ್ನತಿ, ನಾಗಾವಿ, ಕಮ್ಮಟಗಿ, ಬಾದಾಮಿ, ಐಹೊಳೆ, ಬೆಂಗಳೂರು, ಲಕ್ಕುಂಡಿ, ಬನವಾಸಿ, ತಲಕಾಡು, ಬಳ್ಳಿಗಾವಿ, ಬೇಲೂರು, ಹಳೇಬೀಡು, ಮಳಖೇಡ, ಮೇಲುಕೋಟೆ ಸೇರಿದಂತೆ ಹದಿನಾಲ್ಕು ಪ್ರದೇಶಗಳನ್ನು ಪಾರಂಪರಿಕ ಪ್ರದೇಶಗಳೆಂದು ಘೋಷಣೆ ಮಾಡಲಾಗಿದೆ. ಪ್ರಸ್ತುತ 20 ಪಾರಂಪರಿಕ ಪ್ರದೇಶಗಳಿದ್ದು ಅವುಗಳಲ್ಲಿರುವ ಸ್ಮಾರಕಗಳ, ಕಟ್ಟಡಗಳ ಇನ್‌ವೆಂಟರಿ ತಯಾರಿಸಿ, ಸಮಗ್ರ ಅಭಿವೃದ್ಧಿ ಯೋಜನೆಯಂತೆ ಸಂರಕ್ಷಣಾ ಕಾರ್ಯವನ್ನು ಕೈಗೊಳ್ಳುತ್ತಿದೆ.

ಇಲಾಖೆಯ ಆಡಳಿತದ ವ್ಯಾಪ್ತಿಯಲ್ಲಿ ಉಪನಿರ್ದೇಶಕರ ಕಛೇರಿ, ಮೈಸೂರು, (ಪರಂಪರೆ) ಗುಲ್ಬರ್ಗಾ, ಬೆಂಗಳೂರು, ಧಾರವಾಡ ಹಾಗೂ ಕಮಲಾಪುರ (ಹಂಪಿ)ಯಲ್ಲಿ ಐದು ಉಪನಿರ್ದೇಶಕರ ಕಛೇರಿಗಳು ಇವೆ ಹಾಗೂ ಬೆಂಗಳೂರು, ಚಿತ್ರದುರ್ಗ, ಶಿವಮೊಗ್ಗ, ಮೈಸೂರು, ಶ್ರೀರಂಗಪಟ್ಟಣ, ಯಳಂದೂರು, ಹಾಸನ, ಮಡಿಕೇರಿ, ಮಂಗಳೂರು, ಕಿತ್ತೂರು, ಗದಗ, ಗುಲ್ಬರ್ಗಾ ರಾಯಚೂರು, ಹೂವಿನಹಡಗಲಿ, ಬಸವಕಲ್ಯಾಣ ಸೇರಿದಂತೆ ಒಟ್ಟು ಹದಿನೈದು ಸರ್ಕಾರಿ ಸಂಗ್ರಹಾಲಯಗಳು ಮತ್ತು ಬೆಂಗಳೂರಿನ ವೆಂಕಟಪ್ಪ ಚಿತ್ರಶಾಲೆ ಕಲಾ ಗ್ಯಾಲರಿ ಮತ್ತು ಅಥಣಿಯಲ್ಲಿ ಶಿಲ್ಪಗಳ ಗ್ಯಾಲರಿಗಳು ಇಲಾಖೆಯ ಅಧೀನದಲ್ಲಿ ಕಾರ್ಯನಿರತವಾಗಿವೆ.

**1. ಸಿಬ್ಬಂದಿಯ ವಿವರಗಳು :**

| ಹುದ್ದೆಗಳ ವರ್ಗ | ಮಂಜೂರಾಗಿರುವ ಹುದ್ದೆಗಳು | ಭರ್ತಿಯಾಗಿರುವ ಹುದ್ದೆಗಳು | ಪುರುಷರು | ಮಹಿಳೆಯರು | ಖಾಲಿಯಿರುವ ಹುದ್ದೆಗಳು |
|---|---|---|---|---|---|
| ಎ | 13 | 7 | **7** | **0** | 6 |
| ಬಿ | 8 | 2 | **2** | **0** | 6 |
| ಸಿ | 84 | 44 | **27** | **17** | 40 |
| ಡಿ | 118 | 48 | **34** | **14** | 70 |
| **ಒಟ್ಟು** | **223** | **101** | **70** | **31** | **122** |

**2. ಅಧಿಕ ಪ್ರಭಾರ:–**

1. ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 318 ಸೇಆಸೆ 2016 ದಿನಾಂಕ:28.06.2016ರ ಮೇರೆಗೆ ಡಾ॥ ಎನ್.ಮಂಜುಳ, ಭಾ.ಆ.ಸೇ., ಇವರನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಹುದ್ದೆಗೆ ಸಮವರ್ತಿತ ಪ್ರಭಾರದಲ್ಲಿರಿಸಿ ನೇಮಿಸಲಾಗಿದೆ.

2. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 91 ಕೆಎಂಯು 2015 ದಿನಾಂಕ:04/08/2016ರನ್ವಯ ಡಾ॥ ಗವಿಸಿದ್ದಯ್ಯ, ಪತ್ರ ಪಾಲಕರು, ಮೈಸೂರು ವಿಭಾಗೀಯ ಪತ್ರಾಗಾರ ಇಲಾಖೆ, ಮೈಸೂರು, ಇವರನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇಲ್ಲಿ ಖಾಲಿ

ಇರುವ ಉಪನಿರ್ದೇಶಕರು (ಪರಂಪರೆ) ಹುದ್ದೆಯ ಅಧಿಕ ಪ್ರಭಾರದ ಜೊತೆಗೆ ನಿರ್ದೇಶಕರು (ಪ್ರಾಚ್ಯವಸ್ತು) ಹುದ್ದೆಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿಡಲಾಗಿದೆ.

3. ಸರ್ಕಾರದ ತಿದ್ದುಪಡಿ ಸಂಖ್ಯೆ:ಕಸಂವಾ 91 ಕೆಎಂಯು 2015 ದಿನಾಂಕ:02.01.2017ರಲ್ಲಿ ಡಾ॥ ಗವಿಸಿದ್ದಯ್ಯ, ಪತ್ರ ಪಾಲಕರು, ಮೈಸೂರು ವಿಭಾಗೀಯ ಪತ್ರಾಗಾರ ಇಲಾಖೆ, ಮೈಸೂರು, ಇವರನ್ನು ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇಲ್ಲಿ ಖಾಲಿ ಇರುವ ಉಪನಿರ್ದೇಶಕರು (ಪರಂಪರೆ) ಹುದ್ದೆಯ ಅಧಿಕ ಪ್ರಭಾರದ ಜೊತೆಗೆ ನಿರ್ದೇಶಕರು (ಪ್ರಾಚ್ಯವಸ್ತು) ಹುದ್ದೆಯಲ್ಲಿ ಹೆಚ್ಚುವರಿ ಪ್ರಭಾರದಲ್ಲಿಡಲಾಗಿದೆ ಎಂದು ದಿನಾಂಕ 04.08.2016ರಂದು ಹೊರಡಿಸಿರುವ ಅಧಿಸೂಚನೆಯನ್ನು ದಿನಾಂಕ 31/05/2015ರಿಂದ ಜಾರಿಗೆ ಬರುವಂತೆ ತಿದ್ದುಪಡಿ ಮಾಡಲಾಗಿದೆ.

4. ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 91 ಕೆಎಂಯು 2015 ದಿನಾಂಕ:29.05.2015ರ ಮೇರೆಗೆ ಶ್ರೀ ಡಿ.ಶಿವಪ್ಪ, ಸಹಾಯಕ ನಿರ್ದೇಶಕರು, ಸರ್ಕಾರಿ ವಸ್ತುಸಂಗ್ರಹಾಲಯ, ಚಿತ್ರದುರ್ಗ ಇವರನ್ನು ಖಾಲಿ ಇರುವ ಉಪನಿರ್ದೇಶಕರ ಹುದ್ದೆಗೆ ಅಧಿಕ ಪ್ರಭಾರದಲ್ಲಿರಿಸಿ ನೇಮಿಸಲಾಗಿದೆ.

**3. ವೃಂದ ಮತ್ತು ನೇಮಕಾತಿ ನಿಯಮಗಳು :**

ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ಇಲಾಖೆಗೆ ಸರ್ಕಾರದ ಆದೇಶ ಸಂಖ್ಯೆ:ಐಟಿವೈ:67: ಕೆಎಂಯು: 86 ದಿನಾಂಕ 28-2-1992ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರಚಿಸಲಾಗಿತ್ತು. ಪ್ರಸ್ತುತ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಪುನರ್ ರಚನೆ ಕುರಿತಂತೆ, ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಹಾಗೂ ಕರ್ನಾಟಕ ಸಿವಿಲ್ ಸೇವೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ ನಿಯಮಗಳಿಗೆ ಸೂಕ್ತ ತಿದ್ದುಪಡಿಯನ್ನು ತರಲು ಸರ್ಕಾರಕ್ಕೆ ಪ್ರಸ್ತಾಪಿಸಲಾಗುತ್ತಿದೆ).

**4. ಕಾಯ್ದೆ ಮತ್ತು ನಿಯಮಗಳು:**

ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯು ಕೆಳಕಂಡ ಕಾಯ್ದೆ ಮತ್ತು ನಿಯಮಗಳನ್ನು ಹೊಂದಿರುತ್ತದೆ.

1) ಕರ್ನಾಟಕ ಪ್ರಾಚೀನ ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ಸ್ಥಳಗಳು ಮತ್ತು ಅವಶೇಷಗಳ ಅಧಿನಿಯಮ 1961 ಮತ್ತು ನಿಯಮಗಳು 1965.

2) ಕರ್ನಾಟಕ ಗುಪ್ತನಿಧಿ ಕಾಯ್ದೆ 1962 ಮತ್ತು ನಿಯಮಗಳು 1963.

**5. ಸಾರ್ವಜನಿಕ ಕುಂದು ಕೊರತೆಗಳು :**

ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆ ಕುರಿತಂತೆ ಸಾರ್ವಜನಿಕರಿಂದ ಹಾಗೂ ಸಂಘ ಸಂಸ್ಥೆಗಳಿಂದ ಸ್ಮಾರಕಗಳ ಸಂರಕ್ಷಣೆಗಾಗಿ ಮನವಿಗಳು ಬರುತ್ತಿದ್ದು ಅವುಗಳನ್ನು ಆದ್ಯತೆಯ ಮೇರೆಗೆ ಇಲಾಖೆಯಲ್ಲಿ ಲಭ್ಯವಿರುವ ಅನುದಾನವನ್ನು ಗಮನದಲ್ಲಿರಿಸಿಕೊಂಡು ಪರಿಗಣಿಸಿ ಸಂರಕ್ಷಣಾ ಕಾರ್ಯವನ್ನು ನಿರ್ವಹಿಸುತ್ತಿದೆ.

**6. ಆಯ-ವ್ಯಯ :**

2016-17ನೇ ಸಾಲಿನ ಆಯವ್ಯಯದ ವಿವರಗಳು (ರೂ.ಲಕ್ಷಗಳಲ್ಲಿ)

| **ಕ್ರಮ ಸಂಖ್ಯೆ** | **ಶೀರ್ಷಿಕೆ** | **ಆಯುವ್ಯಯ ಅಂದಾಜು** | **ಮಾರ್ಚ್2016ರ ವರೆಗೆ ವೆಚ್ಚ** | **ಶೇಕಡವಾರು** |
|---|---|---|---|---|
| 1 | ಯೋಜನೆ | 2496.00 | 2016.95 | 81% |
| 2 | ಯೋಜನೇತರ | 851.00 | 716.95 | 84% |
| | **ಒಟ್ಟು** | **3347.00** | **2733.90** | **82%** |

**7. ಮುಂದುವರೆದ ಯೋಜನಾ ಕಾರ್ಯಕ್ರಮ :**

2016-17ನೇ ಸಾಲಿನ ವಾರ್ಷಿಕ ವರ್ಷದಲ್ಲಿ ಮುಂದುವರೆದ ಯೋಜನೆಯ ಕಾರ್ಯಕ್ರಮಗಳಿಗೆ ರೂ.2496.00ಲಕ್ಷ ಅನುದಾನವನ್ನು ಆಯವ್ಯಯದಲ್ಲಿ ಕಲ್ಪಿಸಲಾಗಿದ್ದು, ಇದಕ್ಕೆ **ಸರ್ಕಾರದ ಆದೇಶದ ಸಂಖ್ಯೆ:ಕಸಂವಾ 112 ಕೆಎಂಯು 2016 ದಿನಾಂಕ:03.06.2016**ರಲ್ಲಿ ಕ್ರಿಯಾ ಯೋಜನೆಗೆ ಸರ್ಕಾರದ ಅನುಮೋದನೆ ದೊರೆತಿದೆ.

- ಪ್ರಸಕ್ತ ಸಾಲಿನ ಯೋಜನಾ ಬಾಬ್ತಿನಲ್ಲಿ ಬಿಡುಗಡೆಯಾಗಿರುವ ಮೊತ್ತ ರೂ.2496.00ಲಕ್ಷಗಳಿಗನುಗುಣವಾಗಿ ರೂ.2016.95ಲಕ್ಷ ವೆಚ್ಚ ಮಾಡಲಾಗಿದ್ದು, ಶೇ.81% ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

- 2016-17ನೇ ಸಾಲಿನ ವಾರ್ಷಿಕ ವರ್ಷದಲ್ಲಿ ಮುಂದುವರೆದ ಯೋಜನೇತರ ಕಾರ್ಯಕ್ರಮಗಳಿಗೆ ರೂ.851.00ಲಕ್ಷ ಅನುದಾನವನ್ನು ಆಯವ್ಯಯದಲ್ಲಿ ಕಲ್ಪಿಸಲಾಗಿದ್ದು, ಇದರಲ್ಲಿ ರೂ.716.95ಲಕ್ಷ ವೆಚ್ಚ ಮಾಡಿ, ಶೇ.84% ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

**8. ವಿಚಾರ ಸಂಕಿರಣಗಳು, ಪುರಾತತ್ವ ಛಾಯಾಚಿತ್ರ ವಸ್ತುಪ್ರದರ್ಶನಗಳು ಮತ್ತು ಸಮಾರಂಭಗಳು:**

1. ಮೇ 18, 2016ರಂದು ರಾಜ್ಯದ ಇಲಾಖೆಯ ಎಲ್ಲಾ ವಸ್ತುಸಂಗ್ರಹಾಲಯಗಳಲ್ಲಿ ***"ಅಂತರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನಾಚರಣೆ"***ಯನ್ನು ಆಚರಿಸಲಾಯಿತು.

2. ದಿನಾಂಕ 04 ಮತ್ತು 05ನೇ ನವೆಂಬರ್ 2016ರಂದು ವಿಶ್ವ ಪ್ರಸಿದ್ಧ ಹಂಪಿ ಉತ್ಸವದ ಸಂದರ್ಭದಲ್ಲಿ ಇಲಾಖೆಯ ವತಿಯಿಂದ ***"ವಿಜಯನಗರ ಅಧ್ಯಯನ"*** ಕುರಿತು 21ನೇ ವಾರ್ಷಿಕ ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು.

3. ದಿನಾಂಕ 23 ಹಾಗೂ 24ನೇ ಜನವರಿ 2017ರಂದು ***"ಕರ್ನಾಟಕ ವಾಸ್ತುಶಿಲ್ಪ"*** ಕುರಿತು ಎರಡು ದಿನಗಳ ಕಾರ್ಯಾಗಾರವನ್ನು ಇಲಾಖೆಯ ಸಭಾಂಗಣದಲ್ಲಿ ಏರ್ಪಡಿಸಲಾಗಿತ್ತು. ರಾಜ್ಯದ ಎಲ್ಲಾ ವಿಶ್ವವಿದ್ಯಾಲಯಗಳ ಸಂಶೋಧಕರು ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಭಾಗವಹಿಸಿದ ವಿದ್ಯಾರ್ಥಿಗಳಿಗೆ ಸಂಪನ್ಮೂಲ ವ್ಯಕ್ತಿಗಳಿಂದ ವಾಸ್ತುಶಿಲ್ಪ ಅಧ್ಯಯನದ ವಿಧಾನದ ಕುರಿತು ತರಬೇತಿಯನ್ನು ನೀಡಲಾಯಿತು.

4. ಇಲಾಖೆಯ ವತಿಯಿಂದ ದಿನಾಂಕ 22 ರಿಂದ 25ನೇ ಫೆಬ್ರವರಿ 2017ರಂದು ***"ಧರ್ಮ, ಸಾಹಿತ್ಯ ಮತ್ತು ಕಲೆಗಳಲ್ಲಿ ರಾಮನ ಅವತಾರ"*** ಕುರಿತ ನಾಲ್ಕು ದಿನಗಳ ಅಂತರಾಷ್ಟ್ರೀಯ ಮಟ್ಟದ ವಿಚಾರ ಸಂಕಿರಣವನ್ನು ಶ್ರೀ ಸುದರ್ಶನ ನಾರಸಿಂಹ ಕ್ಷೇತ್ರ, ಮೈಸೂರು ಇವರ ಸಹಯೋಗದೊಂದಿಗೆ ಮೈಸೂರಿನ ಕೇಂದ್ರ ಕಛೇರಿಯಲ್ಲಿ ಆಯೋಜಿಸಲಾಗಿದ್ದು, ಈ ವಿಚಾರ ಸಂಕಿರಣದಲ್ಲಿ ಪ್ರಖ್ಯಾತ ಇತಿಹಾಸ ಸಂಶೋಧಕರು ತಮ್ಮ ವಿದ್ವತ್‌ಪೂರ್ಣ ಪ್ರಬಂಧಗಳನ್ನು ಮಂಡಿಸುವುದರ ಜೊತೆಗೆ ವಿವಿಧ ವಿಷಯಗಳ ಕುರಿತು ಅರ್ಥಪೂರ್ಣವಾಗಿ ಚರ್ಚಿಸಲಾಯಿತು.

5. ಹಾಸನ ಜಿಲ್ಲಾ ಚಿತ್ರಕಲಾ ಶಿಕ್ಷಕರ ಸಂಘದ ಸಹಯೋಗದೊಂದಿಗೆ ಮಾರ್ಚ್ 10, 2017 ರಿಂದ ಮೂರು ದಿವಸಗಳ ಕಾಲ ***"ಜಿಲ್ಲಾ ಮಟ್ಟದ ಚಿತ್ರಕಲಾ ಸ್ಪರ್ಧೆ ಮತ್ತು ಶಿಬಿರ"***ದ ಆಯೋಜನೆ ಮಾಡಲಾಯಿತು.

**9. ಇತರೆ ಸಂಸ್ಥೆಯು ಕೈಗೊಳ್ಳುವ ವಿಚಾರ ಸಂಕಿರಣಗಳಿಗೆ/ಕಾರ್ಯಾಗಾರಗಳಿಗೆ ಅನುದಾನ ನೀಡಿರುವುದು.**

ಪ್ರಾಚೀನ ಇತಿಹಾಸ, ಕಲೆ, ಸಂಸ್ಕೃತಿ ಮತ್ತು ಸ್ಮಾರಕಗಳ ಬಗ್ಗೆ ಯುವ ಜನತೆಯಲ್ಲಿ ಅರಿವು ಮೂಡಿಸುವ ಸಲುವಾಗಿ ವಿವಿಧ ಕಾಲೇಜು ಮತ್ತು ಸಂಸ್ಥೆಗಳಿಗೆ ಅನುದಾನದ ನೆರವನ್ನು ಇಲಾಖೆಯು ನೀಡುತ್ತಿದೆ. ಈ ಹಿನ್ನೆಲೆಯಲ್ಲಿ 2016-17ನೇ ಸಾಲಿನಲ್ಲಿ ಕೆಳಕಂಡ ಸಂಸ್ಥೆಗಳಿಗೆ ವಿಚಾರ ಸಂಕಿರಣ ಹಾಗೂ ಕಾರ್ಯಾಗಾರಗಳನ್ನು ಏರ್ಪಡಿಸಲು ಅನುದಾನವನ್ನು **ಸರ್ಕಾರದ ಆದೇಶ ಸಂಖ್ಯೆ:ಕಸಂವಾ/206/ಕೆಎಂಯು/2016 ಬೆಂಗಳೂರು ದಿನಾಂಕ:05.01.2017ರ** ಆದೇಶದಂತೆ ಬಿಡುಗಡೆ ಮಾಡಲಾಗಿದೆ.

1. ಕರ್ನಾಟಕ ಕಲಾ, ವಿಜ್ಞಾನ, ವಾಣಿಜ್ಯ ಕಾಲೇಜು, ಬೀದರ್ ಜಿಲ್ಲೆ ಇವರಿಗೆ ದಕ್ಷಿಣ ಭಾರತದ ಇತಿಹಾಸಕ್ಕೆ **"ಬೀದರ್ ಜಿಲ್ಲೆಯ ರಾಜಮನೆತನಗಳ ಕೊಡುಗೆಗಳು"** ಈ ವಿಷಯದ ಕುರಿತು ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರಸಂಕಿರಣವನ್ನು ಆಯೋಜಿಸಲು ರೂ.1.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

2. ದಿನಾಂಕ:17.02.2017 ಹಾಗೂ 18.02.2017ರಂದು ಸರ್ಕಾರಿ ಮಹಿಳಾ ಕಾಲೇಜು, ಚಿಂತಾಮಣಿ, ಚಿಕ್ಕಬಳ್ಳಾಪುರ ಜಿಲ್ಲೆ ಇಲ್ಲಿ **"ಕೋಲಾರ ಜಿಲ್ಲೆಯಲ್ಲಿನ ಪ್ರಾಚೀನ ರಾಜಮನೆತನಗಳು ಹಾಗೂ ಅವರ ಕೊಡುಗೆಗಳು"** ಈ ವಿಷಯದ ಕುರಿತು ಎರಡು ದಿನಗಳ ರಾಷ್ಟ್ರಮಟ್ಟದ ವಿಚಾರಸಂಕಿರಣವನ್ನು ಆಯೋಜಿಸಲಾಯಿತು. ಇದಕ್ಕಾಗಿ ರೂ.1.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

3. ದಿನಾಂಕ:07.04.2017 ಹಾಗೂ 08.04.2017ರಂದು ಡಿ.ವಿ.ಎಸ್ ಕಲಾ ಮತ್ತು ವಿಜ್ಞಾನ ಕಾಲೇಜು, ಶಿವಮೊಗ್ಗ ಇಲ್ಲಿ **"ವಾಸ್ತುಶಿಲ್ಪಕ್ಕೆ ಮಲೆನಾಡು ಅರಸು ಮನೆತನದ ಕೊಡುಗೆಗಳು"** ಎಂಬ ರಾಜ್ಯ ಮಟ್ಟದ ವಿಚಾರಸಂಕಿರಣವನ್ನು ಆಯೋಜಿಸಲಾಯಿತು. ಇದಕ್ಕಾಗಿ ರೂ.1.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

4. ದಿನಾಂಕ:06.03.2017 ಹಾಗೂ 07.03.2017ರಂದು ಪಿ.ಆರ್.ಎಂ ವಿಜಯಾ ಪ್ರಥಮ ದರ್ಜೆ ಕಾಲೇಜು, ಟಿ.ನರಸೀಪುರ ಇಲ್ಲಿ **"ಪ್ರಾಚೀನ ರಾಜಮನೆತನಗಳ ಸಾಂಸ್ಕೃತಿಕ ಕೊಡುಗೆಗಳು"** ಎಂಬ ರಾಜ್ಯ ಮಟ್ಟದ ವಿಚಾರಸಂಕಿರಣವನ್ನು ಆಯೋಜಿಸಲು ರೂ.1.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

5. ದಿನಾಂಕ:06.01.2017, 07.01.2017 ಹಾಗೂ 08.01.2017ರಂದು ಕರ್ನಾಟಕ ಇತಿಹಾಸ ಕಾಂಗ್ರೆಸ್ ವಾರ್ಷಿಕ ಅಧಿವೇಶನವು ಮೈಸೂರು ವಿಶ್ವವಿದ್ಯಾಲಯದಲ್ಲಿ ಆಯೋಜಿಲ್ಪಟ್ಟಿದ್ದು, ಸಂಘಟನಾ ಕಾರ್ಯದರ್ಶಿ ಇವರಿಗೆ ರೂ.1.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**10. ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹದ ಆಚರಣೆ :**

ನಾಡಿನ ಇತಿಹಾಸ ಮತ್ತು ಪರಂಪರೆಯನ್ನು ಉಳಿಸಿ ಬೆಳೆಸುವ ಧ್ಯೇಯದೊಂದಿಗೆ ಇಲಾಖೆಯು ಪರಂಪರೆ ಉಳಿಸಿ ಸಪ್ತಾಹ ಮಾಡುವ ಸಂಸ್ಥೆ ಮತ್ತು ಅಕಾಡೆಮಿಗಳಿಗೆ ಅನುದಾನ ನೀಡುತ್ತಿದ್ದು, 2016–17ನೇ ಸಾಲಿನಲ್ಲಿ ಕರ್ನಾಟಕ ಇತಿಹಾಸ ಅಕಾಡೆಮಿ (ರಿ), ಬೆಂಗಳೂರು. ಇವರಿಗೆ ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹ ಆಚರಣೆ ಮತ್ತು ಇತಿಹಾಸ ದರ್ಶನ ಸಂಪುಟ ಮುದ್ರಣಕ್ಕೆ ಹಾಗೂ ವಾರ್ಷಿಕ ಸಮ್ಮೇಳನಕ್ಕೆ **ಸರ್ಕಾರದ ಆದೇಶದ ಸಂಖ್ಯೆ:ಕಸಂವಾ 239 ಕೆಎಂಯು 2017 ದಿನಾಂಕ:17.02.2017ರ** ಮೇರೆಗೆ ರೂ.4.00ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ದಿನಾಂಕ:16.08.2016ರಂದು ಐತಿಹಾಸಿಕ ಪರಂಪರೆ ಉಳಿಸಿ ಸಪ್ತಾಹದ ಆಚರಣೆ ಕಾರ್ಯಕ್ರಮವನ್ನು ಯಶಸ್ವಿಯಾಗಿ ನೆರವೇರಿಸಲಾಗಿತ್ತು.

**11. ಪುರಾತತ್ವ ಛಾಯಾಚಿತ್ರ/ಸಾಕ್ಷ್ಯಚಿತ್ರ ಪ್ರದರ್ಶನ/ಸ್ತಬ್ಧಚಿತ್ರ:**

- ದಸರಾ 2016ರ ಸಂದರ್ಭದಲ್ಲಿ ಕಛೇರಿಯ ಆವರಣದಲ್ಲಿ ಭಾರತದ ಪ್ರಮುಖ ಇತಿಹಾಸಕಾರರು ಹಾಗೂ ಪುರಾತತ್ವ ಶಾಸ್ತ್ರಜ್ಞರ ಜೀವನ ಮತ್ತು ಸಾಧನೆ ಬಗ್ಗೆ ವಿದ್ಯಾರ್ಥಿಗಳಿಗೆ/ಸಾರ್ವಜನಿಕರಿಗೆ/ಸಂಶೋಧಕರಿಗೆ ಅರಿವು ಮೂಡಿಸಲು ಛಾಯಾಚಿತ್ರ ಪ್ರದರ್ಶನವನ್ನು ಏರ್ಪಡಿಸಲಾಯಿತು.

- ದಸರಾ ಮಹೋತ್ಸವ–2016ರ ಅಂಗವಾಗಿ ಸಾಕ್ಷ್ಯಚಿತ್ರ ಪ್ರದರ್ಶನವನ್ನು ಏರ್ಪಡಿಸಿದ್ದು, ವಿವಿಧ ಕಾಲೇಜುಗಳ ಸಾವಿರಾರು ವಿದ್ಯಾರ್ಥಿಗಳು ಮತ್ತು ಪ್ರವಾಸಿಗರು ವೀಕ್ಷಿಸಿರುತ್ತಾರೆ.

- ಮೈಸೂರು ದಸರಾ–2016ರ ಜಂಬೂಸವಾರಿಯಲ್ಲಿ ಇಲಾಖೆಯ ವತಿಯಿಂದ **ಬೆಂಗಳೂರು ವಸ್ತುಸಂಗ್ರಹಾಲಯದ ಪಾರಂಪರಿಕ ಕಟ್ಟಡ ಪ್ರತಿಕೃತಿಯ ಸ್ತಬ್ಧಚಿತ್ರವನ್ನು** ಸಿದ್ಧಪಡಿಸಿ ಮೆರವಣಿಗೆಯಲ್ಲಿ ಪ್ರದರ್ಶಿಸಲಾಯಿತು.

- 2016ರ ಕನ್ನಡ ರಾಜ್ಯೋತ್ಸವದ ಅಂಗವಾಗಿ ಹಾಸನ ಜಿಲ್ಲಾ ಆಡಳಿತ ವತಿಯಿಂದ ಕೈಗೊಂಡ ಕಾರ್ಯಕ್ರಮದ ಅಂಗವಾಗಿ **ಹಲ್ಮಿಡಿ ಶಾಸನದ ಪ್ರತಿಕೃತಿಯ ಸ್ತಬ್ಧಚಿತ್ರವನ್ನು** ಸಿದ್ಧಪಡಿಸಿ ಭಾಗವಹಿಸಲಾಯಿತು. ಇದಕ್ಕೆ ದ್ವಿತೀಯ ಬಹುಮಾನ ದೊರೆತಿದೆ.

**12. ಪಾರಂಪರಿಕ ನಡಿಗೆ/ಟಾಂಗಾ/ಸೈಕ್ಲಿಂಗ್ ಕಾರ್ಯಕ್ರಮ :**

1. ವಿಶ್ವ ಪರಂಪರೆ ದಿನಾಚರಣೆ ಅಂಗವಾಗಿ ಏಪ್ರಿಲ್ 18, 19 ಮತ್ತು 20ರ ಏಪ್ರಿಲ್ 2016ರಂದು ಮೂರು ದಿವಸಗಳ ಕಾಲ ಮೈಸೂರಿನಲ್ಲಿರುವ ಮೂರ್ತ ಪರಂಪರೆಯ ಪ್ರತೀಕಗಳಾದ, ಐತಿಹಾಸಿಕ ಕಲಾಕೌಶಲ್ಯದಿಂದ ಕೂಡಿದ ಪಾರಂಪರಿಕ ಕಟ್ಟಡಗಳ ಬಗ್ಗೆ ವಿದ್ಯಾರ್ಥಿಗಳಲ್ಲಿ/ ಸಾರ್ವಜನಿಕರಲ್ಲಿ/ ವಿದೇಶಿ ಪ್ರವಾಸಿಗರಲ್ಲಿ ಮತ್ತು ಇನ್ನಿತರ ಪತ್ರಿಕಾ ಮಾಧ್ಯಮ ವರದಿಗಾರರುಗಳಿಗೆ ಅರಿವು ಮೂಡಿಸುವ ಸಲುವಾಗಿ ಪಾರಂಪರಿಕ ನಡಿಗೆ, ಪಾರಂಪರಿಕ ಟಾಂಗಾ ಮತ್ತು ಸೈಕ್ಲಿಂಗ್ ಕಾರ್ಯಕ್ರಮಗಳನ್ನು ಇಲಾಖೆಯ ವತಿಯಿಂದ ಆಯೋಜಿಸಲಾಗಿತ್ತು.

2. ದಸರಾ ಮಹೋತ್ಸವ ಸಂದರ್ಭದಲ್ಲಿ ಕೈಗೊಳ್ಳುತ್ತಿದ್ದ ಪಾರಂಪರಿಕ ನಡಿಗೆ/ ಪಾರಂಪರಿಕ ಟಾಂಗಾ ಮತ್ತು ಸೈಕ್ಲಿಂಗ್ ಕಾರ್ಯಕ್ರಮವನ್ನು ನಿರಂತರವಾಗಿ ಇಲಾಖೆಯು ಆಯೋಜಿಸುತ್ತಿದೆ.

3. 2016–17ನೇ ಸಾಲಿನಲ್ಲಿ ಆಡಳಿತ ತರಬೇತಿ ಸಂಸ್ಥೆ/ ರಾಜ್ಯ ನಗರಾಭಿವೃದ್ಧಿ ಸಂಸ್ಥೆ/ ಅಂಚೆ ತರಬೇತಿ ಸಂಸ್ಥೆ/ ಪೊಲೀಸ್ ಅಕಾಡೆಮಿಗಳಲ್ಲಿ ತರಬೇತಿಯಲ್ಲಿ ಭಾಗವಹಿಸಿದ ಪ್ರಶಿಕ್ಷಣಾರ್ಥಿಗಳು/ ಬ್ಯಾಂಕ್ ಅಧಿಕಾರಿಗಳು/ ನಗರಪಾಲಿಕೆ ಸದಸ್ಯರು/ ಪ್ರೌಢಶಾಲೆ ಮತ್ತು ಕಾಲೇಜು ವಿದ್ಯಾರ್ಥಿಗಳು/ವಿವಿಧ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದೇಶಿ ವಿದ್ಯಾರ್ಥಿಗಳು/ ಪ್ರವಾಸಿಗರು/ ವಿದೇಶಿ ಪ್ರವಾಸಿಗರು ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳೂ ಸೇರಿದಂತೆ ಪಾರಂಪರಿಕ ನಡಿಗೆ–14, ಪಾರಂಪರಿಕ ಟಾಂಗಾ – 2 ಹಾಗೂ ಪಾರಂಪರಿಕ ಸೈಕ್ಲಿಂಗ್– 2 ಒಟ್ಟಾರೆ **18 ಕಾರ್ಯಕ್ರಮವನ್ನು ಇಲಾಖೆಯಿಂದ ಆಯೋಜಿಸಲಾಗಿದೆ.**

**13. ಪರಂಪರೆ ಕೂಟ:**

ನಾಡಿನ ಮೂರ್ತ, ಅಮೂರ್ತ ಮತ್ತು ನೈಸರ್ಗಿಕ ಪರಂಪರೆಯ ವಿವಿಧ ಮಜಲುಗಳ ಬಗ್ಗೆ ಕಾಲೇಜು ವಿದ್ಯಾರ್ಥಿಗಳಿಗೆ ಮನವರಿಕೆ ಮಾಡುವ ಉದ್ದೇಶದಿಂದ 2016–17ನೇ ಸಾಲಿನಲ್ಲಿ ರಾಜ್ಯದ

ಪ್ರಥಮ ದರ್ಜೆ ಹಾಗೂ ಪದವಿ ಪೂರ್ವ ಕಾಲೇಜುಗಳಲ್ಲಿ 72 ಪಾರಂಪರಿಕ ಕೂಟಗಳನ್ನು ರಚಿಸಿ ರೂ.9.40ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿದೆ.

**14. ಪ್ರಾಚ್ಯ ಪ್ರಜ್ಞೆ:**

2014-15ರಲ್ಲಿ ಆಯವ್ಯಯ ಭಾಷಣದ ಕಂಡಿಕೆ (253)ರಲ್ಲಿ ಘೋಷಣೆಯಂತೆ ರಾಜ್ಯವು ಹಲವಾರು ಪ್ರಾಚೀನ ರಾಜಮನೆತನಗಳ ಆಳ್ವಿಕೆಗಳಿಗೆ ಒಳಪಟ್ಟಿದ್ದು ಈ ರಾಜಮನೆತನಗಳು ತಮ್ಮ ಆಡಳಿತಾವಧಿಯಲ್ಲಿ ಹಲವಾರು ಪಳೆಯುಳಿಕೆಗಳನ್ನು ಸ್ಮಾರಕಗಳ ರೂಪದಲ್ಲಿ ಬಿಟ್ಟುಹೋಗಿವೆ. ಇಂತಹ ಪ್ರಾಚೀನ ಸ್ಮಾರಕಗಳು, ಕಲೆ, ಸಂಸ್ಕೃತಿ, ಸಾಹಿತ್ಯ ಮತ್ತು ವಾಸ್ತುಶಿಲ್ಪ ಶೈಲಿಗಳನ್ನು ಪ್ರೌಢಶಾಲೆ ವಿದ್ಯಾರ್ಥಿಗಳಿಗೆ ಪರಿಚಯಿಸುವ ಸಲುವಾಗಿ ಪ್ರಾಚ್ಯಪ್ರಜ್ಞೆ ಎಂಬ ನೂತನ ಕಾರ್ಯಕ್ರಮವನ್ನು ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾಡಳಿತ, ಕನ್ನಡ ಸಂಸ್ಕೃತಿ, ವಾರ್ತಾ ಹಾಗೂ ಸಾರ್ವಜನಿಕ ಸಂಪರ್ಕ ಇಲಾಖೆ, ಸ್ಥಳೀಯ ನಗರ ಸಭೆ, ಪುರಸಭೆ, ತಾಲ್ಲೂಕು ಆಡಳಿತದ ಸಹಯೋಗದೊಂದಿಗೆ ಇಲಾಖೆಯು ಪ್ರಾಚ್ಯಪ್ರಜ್ಞೆ ಕಾರ್ಯಕ್ರಮವನ್ನು2014-15ನೇ ಸಾಲಿನಿಂದ ಅನುಷ್ಠಾನಗೊಳಿಸಲಾಗುತ್ತಿದೆ. ಇದು ನಿರಂತರ ಕಾರ್ಯಕ್ರಮವಾಗಿದ್ದು, 2016-17ನೇ ಸಾಲಿನಲ್ಲಿಯೂ ಸಹ ಮುಂದುವರೆಸಲಾಗಿದೆ. 2016-17ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ **ರೂ.26.00ಲಕ್ಷಗಳನ್ನು ವೆಚ್ಚ ಮಾಡಿ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು**.

**15. ಪಾರಂಪರಿಕ ಕಲಾ ಶಿಬಿರ:**

ನಾಡಿನ ಪ್ರಾಚೀನ ಸಂಸ್ಕೃತಿ, ಕಲೆ, ಶಿಲ್ಪಕಲೆ, ವಾಸ್ತುಶಿಲ್ಪ ಮುಂತಾದ ಪಾರಂಪರಿಕ ಸಂಪತ್ತನ್ನು ಸಂರಕ್ಷಿಸಿ, ಮುಂದಿನ ಪೀಳಿಗೆಗೆ ಕಾಯ್ದಿರಿಸುವ ಕಾರ್ಯವನ್ನು ಮಾಡುತ್ತಿದೆ. ಇದರ ಅಂಗವಾಗಿ ಮೈಸೂರಿನಲ್ಲಿ ಪ್ರಸಿದ್ಧಿಯಾಗಿದ್ದ, ಸಾಂಪ್ರದಾಯಿಕ ಚಿತ್ರಕಲೆ ಮತ್ತು ಸಮಕಾಲೀನ ಚಿತ್ರ ಕಲೆಯು ಇತ್ತೀಚಿನ ದಿನಗಳಲ್ಲಿ ಮಾಯವಾಗುತ್ತಿದ್ದು; ಅದರ ಬಗ್ಗೆ ಅರಿವು ಮೂಡಿಸಲು ಮತ್ತು ಅಂತಹ ಚಿತ್ರಕಲಾವಿದರನ್ನು ಗುರ್ತಿಸಿ, ಅವರ ಕಲೆಗೆ ಪ್ರೋತ್ಸಾಹವನ್ನು ನೀಡಲು 2016-17ನೇ ಸಾಲಿನಲ್ಲಿ ಈ ಕಾರ್ಯಕ್ರಮಕ್ಕೆ ರೂ.3.48ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**16. ವಿಚಾರ ಸಂಕಿರಣ:**

ರಾಜ್ಯದಲ್ಲಿರುವ ಪ್ರಾಚೀನ ಸ್ಮಾರಕಗಳು, ದೇವಾಲಯಗಳು; ದೇವಾಲಯಗಳಲ್ಲಿರುವ ಕಲಾ ಶೈಲಿ, ವೈಭವತೆ, ವರ್ಣಚಿತ್ರ, ಚಿತ್ರಕಲಾ ಕೌಶಲ್ಯ ಮತ್ತು ಪಾರಂಪರಿಕ ವಿಭಾಗಗಳಾದ ಮೂರ್ತ, ಅಮೂರ್ತ ಮತ್ತು ನೈಸರ್ಗಿಕ ಪರಂಪರೆಯ ಬಗ್ಗೆ ಮತ್ತು ಅವುಗಳನ್ನು ಉಳಿಸಿ, ಬೆಳೆಸಿ, ಸಂರಕ್ಷಿಸಿ ಮುಂದಿನ ಪೀಳಿಗೆಗೆ ಹಸ್ತಾಂತರಿಸುವುದಲ್ಲದೇ ಈ ವಿಚಾರ ಸಂಕಿರಣದಿಂದ ಸಂಶೋಧನಾತ್ಮಕ ವಿಚಾರ ವಿನಿಮಯವು ಪರಿಣಿತ ಸಂಶೋಧಕರು ಹಾಗೂ ವಿದ್ಯಾರ್ಥಿಗಳ ನಡುವೆ ಸಂಪರ್ಕ ಸೇತುವೆ ಕಲ್ಪಿಸಲು ಸಹಕಾರಿಯಾಗಲಿರುವುದರಿಂದ 2016-17ನೇ ಆರ್ಥಿಕ ಸಾಲಿನಲ್ಲಿ ವಿಚಾರ ಸಂಕಿರಣಗಳನ್ನು ರಾಜ್ಯದಲ್ಲಿರುವ ಪ್ರಥಮ ದರ್ಜೆ ಕಾಲೇಜುಗಳು/ಪದವಿ ಪೂರ್ವ ಕಾಲೇಜುಗಳು ಹಾಗೂ ಸಂಘ ಸಂಸ್ಥೆಗಳ ಸಹಯೋಗದೊಂದಿಗೆ ಹಮ್ಮಿಕೊಳ್ಳಲು ಈ ಕಾರ್ಯಕ್ರಮಕ್ಕೆ ರೂ.5.00ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**17. ಎನ್.ಎಸ್.ಎಸ್ ಕಾರ್ಯಕ್ರಮ:**

20 ಪಾರಂಪರಿಕ ಪ್ರದೇಶಗಳಲ್ಲಿರುವ ಐತಿಹಾಸಿಕ ಸ್ಮಾರಕಗಳು ಮತ್ತು ಪಾರಂಪರಿಕ ಕಟ್ಟಡಗಳ ಸ್ವಚ್ಛತೆಯನ್ನು ಕೈಗೊಳ್ಳಲು ಎನ್.ಎಸ್.ಎಸ್ ಸಂಚಾಲಕರುಗಳಿಗೆ ಪೆಯೀಸಿ ರಿಸೀಟ್ ಮೂಲಕ ಅನುದಾನವನ್ನು ಬಿಡುಗಡೆ ಮಾಡಿ ಇವುಗಳ ರಕ್ಷಣೆ ಮತ್ತು ಸ್ವಚ್ಛತೆ ಕಾಪಾಡಲು ಕಾರ್ಯಕ್ರಮಕ್ಕೆ ರೂ.2.77 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

**18. ಸಂಶೋಧನಾ ಕಾರ್ಯಕ್ರಮ:**

2016–17ನೇ ಆರ್ಥಿಕ ಸಾಲಿನಲ್ಲಿ Stylistic and Technical Authentication of Bronzes of Karnataka ಅಧ್ಯಯನ ಕಾರ್ಯಕ್ರಮಕ್ಕಾಗಿ ರೂ.7.50ಲಕ್ಷ ವೆಚ್ಚ ಮಾಡಲಾಗಿದೆ.

**19. ಉತ್ಖನನ :**

ಇಲಾಖೆಯ ವತಿಯಿಂದ ಹಂಪಿ, ತಲಕಾಡು, ಮಣ್ಣೆ ಹಾಗೂ ಹಾವೇರಿ ಜಿಲ್ಲೆ, ಹಾನಗಲ್ ತಾಲ್ಲೂಕು, ಕುಂತಿ ದಿಬ್ಬದಲ್ಲಿ ಇಲಾಖಾ ವತಿಯಿಂದ ಉತ್ಖನನವನ್ನು ಕೈಗೊಳ್ಳಲು ಭಾರತೀಯ ಪುರಾತತ್ವ ಸರ್ವೇಕ್ಷಣೆಯ (ಅಃಂ)ಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗಿದೆ.

**20. ಸಂರಕ್ಷಣಾ ಕಾಮಗಾರಿ :**

ಇಲಾಖೆಯ ವತಿಯಿಂದ ವಿವಿಧ ಲೆಕ್ಕಶೀರ್ಷಿಕೆಯಡಿ ಸ್ಮಾರಕಗಳ ಸಂರಕ್ಷಣೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ತಾಂತ್ರಿಕ ಸಲಹಾ ಸಮಿತಿಯಲ್ಲಿ ಅನುಮೋದನೆ ಪಡೆದು ಇ–ಟೆಂಡರ್ ಮೂಲಕ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

**ಲೆಕ್ಕಶೀರ್ಷಿಕೆ: 2205–00–103–0–01 (ಯೋಜನೆ) 059 ಇತರೆ ಖರ್ಚುಗಳು**

| ಕ್ರ. ಸಂ | ಕಾಮಗಾರಿಗಳ ವಿವರ | ವೆಚ್ಚ |
|---|---|---|
| | **ಮುಂದುವರೆದ ಕಾಮಗಾರಿಗಳು : ಮೈಸೂರು ವಿಭಾಗ** | |
| 1 | ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು ಚಿಕ್ಕಯ್ಯನಛತ್ರ ಗ್ರಾಮದ ಶ್ರೀ ಪ್ರಸನ್ನ ನಂಜುಂಡೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 20.00 |
| 2 | ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು, ವಾಜಮಂಗಲದ ಶ್ರೀ ಅಂಕನಾಥೇಶ್ವರ ದೇವಾಲಯದ ಸಂರಕ್ಷಣಾ ಕೆಲಸ | 10.00 |
| 3 | ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ಗೊದ್ದನಪುರ ಶಂಭುಲಿಂಗಸ್ವಾಮಿ ದೇವಸ್ಥಾನ ಸಂರಕ್ಷಣಾ ಕೆಲಸ. | 20.58 |
| 4 | ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ತಗಡೂರು ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಾಲಯ ಸಂರಕ್ಷಣಾ ಕೆಲಸ. | 11.15 |
| 5 | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಬೆಳಗಲಿಯಲ್ಲಿರುವ ಶ್ರೀ ವೇಣುಗೋಪಾಲಸ್ವಾಮಿ ದೇವಾಲಯದ ಸಂರಕ್ಷಣಾ ಕೆಲಸ | 10.00 |
| 6 | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ವರಕೂಡು ಗ್ರಾಮದ ಶ್ರೀ ವರದರಾಜೇಶ್ವರ ದೇವಾಲಯದ ನೆಲಹಾಸು ಮಾಡಿ ಸಂರಕ್ಷಣಾ ಕಾಮಗಾರಿ | 16.40 |
| 7 | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು ಗುಂಗ್ರಾಲ್ ಛತ್ರದ ಈಶ್ವರ ದೇವಸ್ಥಾನದ 2ನೇ ಹಂತದ ಕಾಮಗಾರಿ. | 8.18 |

| | | |
|---|---|---|
| 8 | ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು ನಾಗರಘಟ್ಟದಲ್ಲಿರುವ ಶ್ರೀ ರಾಮೇಶ್ವರ ದೇವಾಲಯದ ಸಂರಕ್ಷಣಾ ಕೆಲಸ | 10.00 |
| 9 | ಮಂಡ್ಯ ಜಿಲ್ಲೆ ಕೆ.ಆರ್ ಪೇಟೆ ತಾಲ್ಲೂಕು ಸಿಂಧಘಟ್ಟ ಗ್ರಾಮದಲ್ಲಿರುವ ಶ್ರೀ ಮಾರಮ್ಮ ದೇವಾಲಯದ ಸಂರಕ್ಷಣೆ. | 5.00 |
| 10 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ಹರವು ಗ್ರಾಮದಲ್ಲಿರುವ ಶ್ರೀ ಕೋದಂಡರಾಮಸ್ವಾಮಿ ದೇವಾಲಯದಸಂರಕ್ಷಣಾ ಕೆಲಸ | 9.43 |
| 11 | ಚಾಮರಾಜನಗರ ಜಿಲ್ಲೆ, ತ್ರಿಯಂಭಕಪುರದಲ್ಲಿರುವ ಶ್ರೀ ಪಂಚಲಿಂಗೇಶ್ವರ ದೇವಾಲಯದ ಸಂರಕ್ಷಣಾ ಕೆಲಸ | 8.60 |
| 12 | ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಹಳೇಬಿಡಿನಲ್ಲಿರುವ ಶ್ರೀ ರಂಗನಾಥ ದೇವಾಲಯದ ಸಂರಕ್ಷಣಾ ಕೆಲಸ (ಎರಡನೇ ಹಂತ) | 15.00 |
| | **ಒಟ್ಟು ಮೈಸೂರು ವಿಭಾಗ** | **144.34** |
| | **ಬೆಂಗಳೂರು & ಬಳ್ಳಾರಿ ವಿಭಾಗ** | |
| 13 | ಕೋಲಾರ ಜಿಲ್ಲೆ, ಕೋಲಾರ ತಾಲ್ಲೂಕು ಬೇಗಿಲಿ ಹೊಸಹಳ್ಳಿ ಅಂಚೆ ಕಲ್ಲಂಡೂರು ಗ್ರಾಮದಲ್ಲಿರುವ ಶ್ರೀ ಈಶ್ವರ ದೇವಾಲಯದ ಸಂರಕ್ಷಣಾ ಕೆಲಸ | 30.97 |
| 14 | ತುಮಕೂರು ಜಿಲ್ಲೆ ತಿಪ್ಪಟೂರು ತಾ॥ ತಂಡಗ ಗ್ರಾಮದಲ್ಲಿರುವ ಶ್ರೀ ವೆಂಕಟ್ಟಸ್ವಾಮಿ/ಚನ್ನಕೇಶವ ದೇವಸ್ಥಾನ ಸಂರಕ್ಷಣಾ ಕಾಮಗಾರಿ. | 4.60 |
| | **ಒಟ್ಟು ಬೆಂಗಳೂರು & ಬಳ್ಳಾರಿ ವಿಭಾಗ** | **35.57** |
| | **ಬೆಳಗಾವಿ/ಗುಲ್ಬರ್ಗ ವಿಭಾಗ** | |
| 15 | ಬಾಗಲಕೋಟ ಜಿಲ್ಲೆ, ಹುನಗುಂದ ತಾಲ್ಲುಕು ಸೂಳೆಭಾವಿಯಲ್ಲಿರುವ ಸೂಳೇಭಾವಿ {ಸೂಲೇಶ್ವರ} ಸ್ಮಾರಕದ ಸಂರಕ್ಷಣಾ ಕಾಮಗಾರಿ. | 11.58 |
| 16 | ಬಿಜಾಪೂರ ಜಿಲ್ಲೆ, ಇಂಡಿ ತಾಲ್ಲೂಕು, ಹಂಚನಾಳದಲ್ಲಿರುವ ಶ್ರೀ ಬಿರೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ | 5.15 |
| 17 | ಬಿಜಾಪೂರ ಜಿಲ್ಲೆ, ಇಂಡಿ ತಾಲ್ಲೂಕು, ಹೀರೆಬೇವನೂರದಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವಾಲಯದ ಸಂರಕ್ಷಣಾ ಕಾಮಗಾರಿ | 3.60 |
| 18 | ಗದಗ ಜಿಲ್ಲೆ ರೋಣ ತಾಲ್ಲೂಕು, ಭೋಪಳಾಪುರದಲ್ಲಿಯ ಅಮರೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ. | 15.37 |
| 19 | ಬೆಳಗಾವಿ ಜಿಲ್ಲೆ, ಸವದತ್ತಿ ತಾಲ್ಲೂಕಿನ ಹೂಲಿಯಲ್ಲಿರುವ ಅಗಸ್ತೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ. | 17.42 |
| | **ಒಟ್ಟು ಬೆಳಗಾವಿ ವಿಭಾಗ** | **53.12** |
| | **059–ಇತರೆ ಖರ್ಚುಗಳು – ಮುಂದುವರೆದ ಕಾಮಗಾರಿಗಳು** | **233.08** |
| | **200 ನಿರ್ವಹಣೆ – ಮುಂದುವರೆದ ಕಾಮಗಾರಿಗಳು** | |
| | **ಬೆಳಗಾವಿ/ಗುಲ್ಬರ್ಗ ವಿಭಾಗ** | |
| **1** | ಗದಗ ಜಿಲ್ಲೆ ಮುಳಗುಂದದಲ್ಲಿರುವ ಸಿದ್ದೇಶ್ವರ ದೇವಸ್ಥಾನದ ಉದ್ಯಾನವನದ ನಿರ್ವಹಣೆ | 1.16 |

| | | |
|---|---|---|
| | **ಒಟ್ಟು – ಮುಂದುವರೆದ ಕಾಮಗಾರಿಗಳು** | **1.16** |
| | **ಹೊಸ ಕಾಮಗಾರಿಗಳು** | |
| | **ಮೈಸೂರು ವಿಭಾಗ** | |
| 1 | ಹಾಸನ ಜಿಲ್ಲೆ, ಅರಸೀಕೆರೆ ತಾಲ್ಲೂಕು, ಹಾರನಹಳ್ಳಿಯಲ್ಲಿರುವ ಶ್ರೀ ಚೆನ್ನಕೇಶವ ದೇವಾಲಯದ ಆವರಣದ ಉದ್ಯಾನವನದ ನಿರ್ವಹಣೆ. | 4.68 |
| | **ಬೆಳಗಾವಿ/ಗುಲ್ಬರ್ಗ ವಿಭಾಗ** | |
| 2 | ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕು ಲಕ್ಷ್ಮೇಶ್ವರದಲ್ಲಿರುವ ಶ್ರೀ ಸೋಮೇಶ್ವರ ದೇವಾಲಯದ ವಾರ್ಷಿಕ ನಿರ್ವಹಣೆ ಹಾಗೂ ಉದ್ಯಾನವನದ ನಿರ್ವಹಣೆ. | 1.10 |
| | **ಒಟ್ಟು – ಹೊಸ ಕಾಮಗಾರಿಗಳು** | **5.78** |

**ಲೆಕ್ಕಶೀರ್ಷಿಕೆ: 2205–00–103–0–21 ಪರಂಪರೆ ಆಯುಕ್ತರು**

**ಯೋಜನೆ 059–ಇತರೆ ಖರ್ಚುಗಳು**

| ಕ್ರ. ಸಂ | ಕಾಮಗಾರಿಗಳ ವಿವರ | ವೆಚ್ಚ |
|---|---|---|
| | **ಆಯವ್ಯಯದಲ್ಲಿ ಘೋಷಿತ ಕಾರ್ಯಕ್ರಮಗಳು** | |
| | **2016–17ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ (241)** | |
| 1 | ಯಾದಗಿರಿ ಜಿಲ್ಲೆ, ಶಹಪುರ ತಾಲ್ಲೂಕು, ಶಿರವಾಳ ಸ್ಮಾರಕಗಳ ಸಮುಚ್ಚಯಗಳ ಸಂರಕ್ಷಣೆ | 57.92 |
| 2 | ಚಾಮರಾಜನಗರ ಜಿಲ್ಲೆ ಚಾಮರಾಜನಗರ ತಾಲ್ಲೂಕು ಚಾಮರಾಜನಗರದಲ್ಲಿರುವ ಶ್ರೀ ಚಾಮರಾಜೇಶ್ವರ ದೇವಾಲಯದ ಸಂರಕ್ಷಣೆ | 29.00 |
| | **ಒಟ್ಟು 2016–17ನೇ ಸಾಲಿನ ಆಯವ್ಯಯ ಭಾಷಣ** | **86.92** |
| | **ಮುಂದುವರೆದ ಕಾಮಗಾರಿಗಳು** | |
| 3 | ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲ್ಲೂಕು ದೇಗುಲವಳ್ಳಿಯಲ್ಲಿರುವ ಶ್ರೀ ಈಶ್ವರ ದೇವಸ್ಥಾನದ ಸಂರಕ್ಷಣಾ ಕಾಮಗಾರಿ | 3.77 |
| | **2015–16ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ (282)** | |
| 4 | ಘೋಷಿತ 20 ಪಾರಂಪರಿಕ ಪ್ರದೇಶಗಳ ಪೈಕಿ ಶ್ರೀರಂಗಪಟ್ಟಣ, ಮೇಲುಕೋಟೆ, ವಿಜಯಪುರ, ಬೀದರ್, ಲಕ್ಕುಂಡಿ ಸೇರಿದಂತೆ ಒಟ್ಟಾರೆ 5 ಪಾರಂಪರಿಕ ಪ್ರದೇಶಗಳ ಸಮಗ್ರ ಅಭಿವೃದ್ಧಿಗಾಗಿ (ತಲಾ ರೂ.10.00ಲಕ್ಷಗಳಂತೆ) | |

| | | |
|---|---|---|
| | ಲಿಂಗಯ್ಯನ ಕೊಳದ ಸಂರಕ್ಷಣೆ | 20.10 |
| | ಮದ್ದಿನಮನೆ ಸಂರಕ್ಷಣೆ | 15.53 |
| | ಗದಗ ಲಕ್ಷ್ಮೇಶ್ವರ ದೇವಾಲಯದ ಸಂರಕ್ಷಣೆ | 10.18 |
| | | **45.81** |
| | **ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ (283)** | |
| 5 | ಕಲಬುರ್ಗಿ ಜಿಲ್ಲೆ ಚಿತ್ತಾಪುರ ತಾಲ್ಲೂಕು ಮಳಖೇಡ ಕೋಟೆಯ ಸಂರಕ್ಷಣೆ ಹಾಗೂ ಸಮಗ್ರ ಅಭಿವೃದ್ಧಿ. | 82.07 |
| | **ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ (285)** | |
| 6 | ಯಾದಗಿರಿ ಜಿಲ್ಲೆ ಸುರಪುರ ತಾಲ್ಲೂಕು ಮುದನೂರು ಗ್ರಾಮದಲ್ಲಿರುವ ಶ್ರೀ ದೇವರದಾಸಿಮಯ್ಯ ದೇವಾಲಯದ ಸಂರಕ್ಷಣಾ ಕೆಲಸ. | 18.57 |
| | **ಸಂರಕ್ಷಣಾ ಕಾಮಗಾರಿಗಳು – ಮುಂದುವರೆದ ಕಾಮಗಾರಿಗಳು** | |
| | **ಮೈಸೂರು ವಿಭಾಗ** | |
| 1 | ಚಾಮರಾಜನಗರ ಜಿಲ್ಲೆ, ಬಂಡಹಳ್ಳಿ ಗ್ರಾಮ ಶ್ರೀ ಚನ್ನಿಗರಾಯಸ್ವಾಮಿ ದೇವಾಲಯ ಸಂರಕ್ಷಣಾ ಕಾಮಗಾರಿ. | 14.80 |
| 2 | ಚಾಮರಾಜನಗರ ಜಿಲ್ಲೆ, ಕೊಳ್ಳೆಗಾಲ ತಾಲ್ಲೂಕು, ದೊಡ್ಡಿಂದವಾಡಿ ಗ್ರಾಮದ ಶ್ರೀ ಶಿವನ (ಶ್ರೀ ನಂಜುಂಡೇಶ್ವರ) ದೇವಾಲಯದ ಸಂರಕ್ಷಣಾ ಕಾಮಗಾರಿ. | 31.24 |
| | **ಒಟ್ಟು ಮುಂದುವರೆದ ಕಾಮಗಾರಿಗಳು** | **46.04** |
| | **ಹೊಸ ಕಾಮಗಾರಿಗಳು** | |
| | **ಮೈಸೂರು ವಿಭಾಗ** | |
| 1 | ಮಂಡ್ಯ ಜಿಲ್ಲೆ, ಕೆ.ಆರ್.ಪೇಟೆ ತಾಲ್ಲೂಕು ಮರುವನಹಳ್ಳಿ ಬಸವೇಶ್ವರಸ್ವಾಮಿ ದೇವಾಲಯದ ಸಂರಕ್ಷಣಾ ಕಾಮಗಾರಿ | 8.04 |
| 2 | ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು ಗುಮ್ಮನಹಳ್ಳಿಯಲ್ಲಿರುವ ಶ್ರೀ ಅಂಜನೇಯಸ್ವಾಮಿ ದೇವಾಲಯದ ಸಂರಕ್ಷಣಾ ಕಾಮಗಾರಿ | 11.63 |
| 3 | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಕೀಳನಪುರ ಗ್ರಾಮದ ಶ್ರೀ ಬಸವೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ | 7.35 |
| 4 | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕು, ಹಾರೋಹಳ್ಳಿ ಗ್ರಾಮದ ಶ್ರೀ ಈಶ್ವರ ಪಾರ್ವತಿ ದೇವಾಲಯದ ಸಂರಕ್ಷಣಾ ಕಾಮಗಾರಿ | 30.96 |
| 5 | ಮೈಸೂರು ಜಿಲ್ಲೆ, ಮೈಸೂರು ತಾಲ್ಲೂಕಿನ ರಾಮಪುರದಲ್ಲಿರುವ ರಾಮಲಿಂಗೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ | 19.45 |
| 6 | ಮೈಸೂರು ಜಿಲ್ಲೆ. ಕೆ.ಆರ್.ನಗರ ತಾಲ್ಲೂಕು ಕೆಸ್ತೂರು ಗ್ರಾಮದಲ್ಲಿ ಶ್ರೀ ವೇಣುಗೋಪಾಲಸ್ವಾಮಿ ಮತ್ತು ಶ್ರೀ ಲಕ್ಷೀ ದೇವಾಲಯದ ಸಂರಕ್ಷಣಾ ಕೆಲಸ. | 18.96 |
| 7 | ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಹಳೇಬಿಡಿನಲ್ಲಿರುವ ಶ್ರೀ ರಂಗನಾಥ ದೇವಾಲಯದ ಸಂರಕ್ಷಣಾ ಕೆಲಸ (ಎರಡನೇ ಹಂತ) | 14.45 |
| 8 | ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ತಗಡೂರು ಗ್ರಾಮದಲ್ಲಿರುವ ಶ್ರೀ ಲಕ್ಷ್ಮೀಕಾಂತಸ್ವಾಮಿ ದೇವಾಲಯ ಸಂರಕ್ಷಣಾ ಕೆಲಸ. | 15.40 |
| | **ಒಟ್ಟು ಮೈಸೂರು ವಿಭಾಗ** | **96.39** |
| | **ಬೆಂಗಳೂರು/ಬಳ್ಳಾರಿ ವಿಭಾಗ** | |

| | | |
|---|---|---|
| 9 | ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕು ದೊಡ್ಡಪಾಲನಹಳ್ಳಿ ಗ್ರಾಮದಲ್ಲಿರುವ ಗಂಗಮಾಳಮ್ಮ ದೇವಾಲಯದ ಸಂರಕ್ಷಣಾ ಕಾಮಗಾರಿ ಕೆಲಸ | 12.37 |
| 10 | ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲ್ಲೂಕು ಹಿರೇಕೋಗಲೂರು ಗ್ರಾಮದಲ್ಲಿರುವ ಶ್ರೀ ಕಲ್ಲೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ ಕೆಲಸ | 13.24 |
| | **ಒಟ್ಟು ಬೆಂಗಳೂರು/ಬಳ್ಳಾರಿ ವಿಭಾಗ** | **25.61** |
| | **ಬೆಳಗಾಂ/ಗುಲ್ಬರ್ಗ ವಿಭಾಗ** | |
| 11 | ಬೀದರ ಜಿಲ್ಲೆ, ಬೀದರ ತಾಲ್ಲೂಕಿನಲ್ಲಿರುವ ಫತೇಪುರ ಗ್ರಾಮದ ಅಮೀರ್ ಫಕೀರ್-ಉಲ್-ಮುಲ್ಕ್-ಗಿಲಾನ್ಸ್ ಗುಂಬಜನ ಸಂರಕ್ಷಣಾ ಕಾಮಗಾರಿ. | 27.74 |
| 12 | ಬಾಗಲಕೋಟೆ ಜಿಲ್ಲೆ, ತೇರದಾಳದಲ್ಲಿರುವ ದೇಸಾಯಿ ಬಾವಿಯ ಸಂರಕ್ಷಣಾ ಕಾಮಗಾರಿ. (ಎರಡನೆ ಹಂತ) | 65.00 |
| | **ಒಟ್ಟು ಬೆಳಗಾಂ/ಗುಲ್ಬರ್ಗ ವಿಭಾಗ ವಿಭಾಗ** | **92.74** |
| | **13ನೇ ಹಣಕಾಸು ಯೋಜನೆ** | |
| | **ಸರ್ಕಾರಿ ಆದೇಶ ಸಂಖ್ಯೆ, ಕಸಂವಾ 36 ಕೆಎಂಯು 2016 ಬೆಂಗಳೂರು ದಿನಾಂಕ:30.06.2016.** | |
| | **ಮುಂದುವರೆದ ಕಾಮಗಾರಿಗಳು** | |
| | **ಮೈಸೂರು ವಿಭಾಗ** | |
| 1. | ಹಾಸನ ಜಿಲ್ಲೆ ಬೇಲೂರು ತಾಲ್ಲೂಕು ಹಳೇಬೀಡಿನಲ್ಲಿರುವ ಶ್ರೀ ವೀರಭದ್ರೇಶ್ವರ ಮತ್ತು ಗುಡಲೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 7.99 |
| 2. | ಹಾಸನ ಜಿಲ್ಲೆ ಅರಕಲಗೂಡು ತಾಲ್ಲೂಕು ಮಲ್ಲರಾಜಪಟ್ಟಣದಲ್ಲಿರುವ ಶ್ರೀ ಲಕ್ಷ್ಮಣೇಶ್ವರ ಮತ್ತು ದೇವಾಲಯದ ಸಂರಕ್ಷಣಾ ಕೆಲಸ. | 7.16 |
| 3. | ಚಿಕ್ಕಮಗಳೂರು ಜಿಲ್ಲೆ ತರೀಕೆರೆ ತಾಲ್ಲೂಕು ಗಡಿಹಳ್ಳಿಯಲ್ಲಿರುವ ಶ್ರೀ ಚೆನ್ನಕೇಶವ ದೇವಾಲಯದ ಸಂರಕ್ಷಣಾ ಕೆಲಸ. | 8.17 |
| 4. | ಮೈಸೂರು ಜಿಲ್ಲೆ ಮೈಸೂರು ತಾಲ್ಲೂಕು ಗುಂಗರಾಲ್ ಛತ್ರದಲ್ಲಿನ ಶ್ರೀ ಈಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 17.69 |
| 5. | ಮಂಡ್ಯ ಜಿಲ್ಲೆ ಶ್ರೀರಂಗಪಟ್ಟಣದಲ್ಲಿರುವ ಕೋಟೆಗೋಡೆಯ ಸಂರಕ್ಷಣಾ ಕೆಲಸ (ಹಂತ 3) | 23.74 |
| | **ಒಟ್ಟು ಮೈಸೂರು ವಿಭಾಗ** | **64.75** |
| | **ಬೆಂಗಳೂರು/ಬಳ್ಳಾರಿ ವಿಭಾಗ** | |
| 6. | ಚಿತ್ರದುರ್ಗ ಜಿಲ್ಲೆ ಚಿತ್ರದುರ್ಗ ತಾಲ್ಲೂಕು ಪ್ರಕಾರ ಮಂಟಪದಲ್ಲಿರುವ ಶ್ರೀ ಉಚ್ಚಂಗಿ ಯಲ್ಲಮ್ಮ ದೇವಾಲಯದ ಸಂರಕ್ಷಣಾ ಕೆಲಸ. | 1.75 |
| 7. | ಚಿತ್ರದುರ್ಗ ಜಿಲ್ಲೆ ಸೊಂದೆಕೊಳ ತಾಲ್ಲೂಕು ಶ್ರೀ ಬಸವೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 1.03 |
| 8. | ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಕುರುಡುಮಲೆಯಲ್ಲಿರುವ ಶ್ರೀ ಚೆನ್ನಕೇಶವ ದೇವಾಲಯದ ಸಂರಕ್ಷಣಾ ಕೆಲಸ. | 27.36 |
| 9. | ಕೋಲಾರ ಜಿಲ್ಲೆ ಮುಳಬಾಗಿಲು ತಾಲ್ಲೂಕು ಮುಳಬಾಗಿಲಿನಲ್ಲಿರುವ ಪುಷ್ಕರಣಿ ಮತ್ತು ಶ್ರೀ ಶ್ರೀಪಾದರಾಯ ಬೃಂದಾವನ ಸಂರಕ್ಷಣಾ ಕೆಲಸ. | 9.87 |
| 10. | ತುಮಕೂರು ಜಿಲ್ಲೆ ಸಿರ ತಾಲ್ಲೂಕು ಸಿರ ಕೋಟೆ ಸಂರಕ್ಷಣಾ ಕೆಲಸ. | 46.48 |

| | | |
|---|---|---|
| 11. | ರಾಮನಗರ ಜಿಲ್ಲೆ ಮಾಗಡಿ ತಾಲ್ಲೂಕು ಮಾಗಡಿಯಲ್ಲಿರುವ ಮಾಗಡಿ ಕೋಟೆಯ ಸಂರಕ್ಷಣಾ ಕೆಲಸ. | 3.66 |
| 12. | ತುಮಕೂರು ಜಿಲ್ಲೆ ತಿಪ್ಪಟೂರು ತಾಾಲ್ಲೂಕು ಅರಳುಗುಪ್ಪೆಯಲ್ಲಿರುವ ಶ್ರೀ ಕಲ್ಲೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 1.83 |
| 13. | ಬೆಂಗಳೂರು ಜಿಲ್ಲೆ ದೇವನಹಳ್ಳಿ ತಾಾಲ್ಲೂಕು ಗಂಗವಾರ ಶ್ರೀ ಸೋಮೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 2.55 |
| 14. | ತುಮಕೂರು ಜಿಲ್ಲೆ ಪಾವಗಡ ತಾಾಲ್ಲೂಕು ನೀಡಗಲ್ ನುಲ್ಲಿರುವ ಶ್ರೀ ಈಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 0.51 |
| | **ಒಟ್ಟು ಬೆಂಗಳೂರು/ಬಳ್ಳಾರಿ ವಿಭಾಗ** | **95.04** |
| | **ಬೆಳಗಾಂ/ಗುಲ್ಬರ್ಗಾ ವಿಭಾಗ** | |
| 15. | ಬೀದರ ಜಿಲ್ಲೆ ಬಸವಕಲ್ಯಾಣ ತಾಲ್ಲೂಕು ಉಮಾಪುರದಲ್ಲಿರುವ ಶ್ರೀ ಉಮಾಮಹೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 23.73 |
| 16. | ಗುಲ್ಬರ್ಗಾ ಜಿಲ್ಲೆ ಅಫಜಲಪುರ ತಾಲ್ಲೂಕು ಗಬ್ಬೂರಿನಲ್ಲಿರುವ ಶ್ರೀ ಕಲ್ಮೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 4.46 |
| 17. | ಗುಲ್ಬರ್ಗಾ ಜಿಲ್ಲೆ ಚಿತ್ತಾಪುರ ತಾಲ್ಲೂಕು ನಗಾವಿಯಲ್ಲಿರುವ ಶ್ರೀ ಹನುಮನ ಮತ್ತು ಈಶ್ವರ ದೇವಾಲಯ ಸಂರಕ್ಷಣಾ ಕೆಲಸ. | 69.46 |
| 18. | ಗುಲ್ಬರ್ಗಾ ಜಿಲ್ಲೆ ಬಂಕೂರಿನಲ್ಲಿರುವ ಶ್ರೀ ಶಾಂತಿನಾಥಬಸದಿಯ ಸಂರಕ್ಷಣಾ ಕೆಲಸ. | 12.53 |
| 19. | ಗುಲ್ಬರ್ಗಾ ಜಿಲ್ಲೆ ಗುಲ್ಬಗಾದಲ್ಲಿರುವ ನೂರ್ಬಾಗ್ ಮಸೀದಿಯ ಸಂರಕ್ಷಣಾ ಕೆಲಸ (3 ಸಂಖ್ಯೆ) | 13.00 |
| 20. | ಕೊಪ್ಪಳ ಜಿಲ್ಲೆ ಗಂಗಾವತಿ ತಾಲ್ಲೂಕು ಆನೆಗುಂದಿಯಲ್ಲಿರುವ ಉತ್ತರ ಬಾಗಿಲ ಕೋಟೆಯ ಸಂರಕ್ಷಣಾ ಕೆಲಸ. | 4.54 |
| 21. | ರಾಯಚೂರು ಜಿಲ್ಲೆ ರಾಯಚೂರು ತಾಲ್ಲೂಕು ಮಲಯಾಬಾದ್‌ನಲ್ಲಿರುವ ಕೋಟೆಯ ಸಂರಕ್ಷಣೆ ಕೆಲಸ. | 2.47 |
| 22. | ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕು ಗಬ್ಬೂರಿನಲ್ಲಿರುವ ಶ್ರೀ ಈಶ್ವರ ಮತ್ತು ಸೂರ್ಯ ದೇವಾಲಯದ ಸಂರಕ್ಷಣಾ ಕೆಲಸ. | 11.44 |
| 23. | ಯಾದಗಿರಿ ಜಿಲ್ಲೆ ಶಹಪುರ ತಾಲ್ಲೂಕು ಸಿರವಾಲದಲ್ಲಿರುವ ಶ್ರೀ ನಾನಯ್ಯ ದೇವಾಲಯದ ಸಂರಕ್ಷಣಾ ಕೆಲಸ. | 19.06 |
| 24. | ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕು ದೇಗುಲವಳ್ಳಿ ಗ್ರಾಮದಲ್ಲಿರುವ ಶ್ರೀ ಈಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 0.34 |
| 25. | ಬೆಳಗಾಂ ಜಿಲ್ಲೆ ಖಾನಾಪುರ ತಾಲ್ಲೂಕು ಹಲಸಿಯಲ್ಲಿರುವ ಶ್ರೀ ಈಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 0.46 |
| 26. | ಬೆಳಗಾಂ ಜಿಲ್ಲೆ ರಾಮದುರ್ಗ ತಾಲ್ಲೂಕಿನ ಕಿಲ್ಲಾತೋರಗಲ್ ಕೋಟೆ ಸಂರಕ್ಷಣಾ ಕೆಲಸ | 2.30 |
| 27. | ಬೆಳಗಾಂ ಜಿಲ್ಲೆ ಶಿವದಟ್ಟಿ ತಾಲ್ಲೂಕು ಪಾರಸಘಡ ಕೋಟೆ ಸಂರಕ್ಷಣಾ ಕೆಲಸ | 20.68 |
| 28. | ಬೆಳಗಾಂ ಜಿಲ್ಲೆ ಬೈಲಹೊಂಗಲ ತಾಲ್ಲೂಕು, ಕಿತ್ತೂರಿನಲ್ಲಿರುವ ಕೋಟೆಯ ಸಂರಕ್ಷಣಾ ಕೆಲಸ. | 13.79 |
| 29. | ಬೆಳಗಾಂ ಜಿಲ್ಲೆ ಸವದತ್ತಿ ತಾಲ್ಲೂಕು, ಮುನವಳ್ಳಿ ಗ್ರಾಮದಲ್ಲಿರುವ ಶ್ರೀ ವೆಂಕಟೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 6.58 |
| 30. | ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ತಾಲ್ಲೂಕು ಶಿರೂರಿನಲ್ಲಿರುವ ಶ್ರೀ ಮಲ್ಲಿಕಾರ್ಜುನ ದೇವಾಲಯದ ಸಂರಕ್ಷಣಾ ಕೆಲಸ. | 5.33 |

| | | |
|---|---|---|
| 31. | ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ತಾಲ್ಲೂಕು ಶಿರೂರಿನಲ್ಲಿರುವ ಶ್ರೀ ರಾಮಲಿಂಗ ದೇವಾಲಯದ ಸಂರಕ್ಷಣಾ ಕೆಲಸ. | 5.83 |
| 32. | ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ತಾಲ್ಲೂಕು ಶಿರೂರಿನಲ್ಲಿರುವ ಶ್ರೀ ನಾರಾಯಣದೇವ ದೇವಾಲಯದ ಸಂರಕ್ಷಣಾ ಕೆಲಸ. | 0.75 |
| 33. | ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕು ತೆರದಾಳದಲ್ಲಿರುವ ಇತಿಹಾಸದ ಕೆರೆ ಹತ್ತಿರ ಅಲ್ಲಮಾ ಪ್ರಭು ದೇವಾಲಯದ ಸಂರಕ್ಷಣಾ ಕೆಲಸ | 4.87 |
| 34. | ಬಾಗಲಕೋಟೆ ಜಿಲ್ಲೆ ಬಾಗಲಕೋಟೆ ತಾ॥ ಸೀತಾ ದೇವಿ ದೇವಸ್ಥಾನ ಸೀತೆಮುನಿ ದೇವಾಲಯದ ಸಂರಕ್ಷಣಾ ಕೆಲಸ | 5.72 |
| 35. | ಬಿಜಾಪುರ ಜಿಲ್ಲೆ ಬಸವನಬಾಗೇವಾಡಿ ತಾಲ್ಲೂಕು ಹೆಬ್ಬಾಳಿನಲ್ಲಿರುವ ಶ್ರೀ ಈಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 9.01 |
| 36. | ಬಿಜಾಪುರ ಜಿಲ್ಲೆ ಬಿಜಾಪುರ ತಾಲ್ಲೂಕು ಬಬ್ಲೇಶ್ವರದಲ್ಲಿರುವ ಶ್ರೀ ಕಲ್ಮೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 26.98 |
| 37. | ಬಿಜಾಪುರ ಜಿಲ್ಲೆ ಬಿಜಾಪುರ ತಾಲ್ಲೂಕು ಬಾಬಾನಗರದಲ್ಲಿರುವ ಶ್ರೀ ಪರಮಾನಂದ ದೇವಾಲಯದ ಸಂರಕ್ಷಣಾ ಕೆಲಸ. | 18.04 |
| 38. | ಗದಗ ಜಿಲ್ಲೆ ಮುಳುಗುಂಡ ತಾಲ್ಲೂಕು ಮುಳುಗುಂದದಲ್ಲಿರುವ ಶ್ರೀ ನಗರೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 0.05 |
| 39. | ಗದಗ ಜಿಲ್ಲೆ ಶಿರಹಟ್ಟಿ ತಾಲ್ಲೂಕು ಲಕ್ಷ್ಮೇಶ್ವರ ಗ್ರಾಮದಲ್ಲಿರುವ ಶ್ರೀ ಲಕ್ಷ್ಮಣಲಿಂಗ ಮತ್ತು ಬಾವಿಯ ಸಂರಕ್ಷಣಾ ಕೆಲಸ. | 0.21 |
| 40. | ಗದಗ ಜಿಲ್ಲೆ, ನರಗುಂದ ತಾಲ್ಲೂಕು ಮೆಣಸಗಿಯ ದುರ್ಗಾದೇವಿ ದೇವಾಲಯದ ಹತ್ತಿರವಿರುವ ಶ್ರೀ ಕಲ್ಮೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 15.48 |
| 41. | ಹಾವೇರಿ ಜಿಲ್ಲೆ ಹಾನಗಲ್ಲು ತಾಲ್ಲೂಕು ತಿಳುವಳ್ಳಿ ಗ್ರಾಮದಲ್ಲಿರುವ ಶ್ರೀ ಶಾಂತೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 0.10 |
| 42. | ಹಾವೇರಿ ಜಿಲ್ಲೆ ಹಿರೇಕೆರೂರು ತಾಲ್ಲೂಕು ಹಂಸಭಾವಿಯ ಗ್ರಾಮದಲ್ಲಿರುವ ಶ್ರೀ ಈಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 3.06 |
| 43. | ಹಾವೇರಿ ಜಿಲ್ಲೆ ರಾಣಿಬೆನ್ನೂರು ತಾಲ್ಲೂಕು ಐರಾಣಿ ಗ್ರಾಮದಲ್ಲಿರುವ ಜೋಡಿ ದೇವಾಲಯದ ಸಂರಕ್ಷಣಾ ಕೆಲಸ. | 0.05 |
| 44. | ಹಾವೇರಿ ಜಿಲ್ಲೆ ರಾಣಿಬೆಣ್ಣೂರು ತಾಲ್ಲೂಕು ಹುಲಿಹಳ್ಳಿ ಗ್ರಾಮದಲ್ಲಿರುವ ಶ್ರೀ ಕಲ್ಮೇಶ್ವರ ದೇವಾಲಯದ ಸಂರಕ್ಷಣಾ ಕೆಲಸ. | 0.96 |
| 45. | ಉತ್ತರ ಕನ್ನಡ ಜಿಲ್ಲೆ, ಭಟ್ಕಳ ತಾಲ್ಲೂಕು ಹಾಡುವಳ್ಳಿ ಗ್ರಾಮದಲ್ಲಿರುವ ಜೈನ ಬಸದಿಯ ಸಂರಕ್ಷಣಾ ಕೆಲಸ. | 10.25 |
| | **ಒಟ್ಟು ಬೆಳಗಾಂ/ಗುಲ್ಬರ್ಗ ವಿಭಾಗ** | **311.53** |
| | **ಒಟ್ಟು 13ನೇ ಹಣಕಾಸು ಯೋಜನೆಯ ಒಟ್ಟಾರೆ ಮೊತ್ತ** | **471.32** |

**21. ವಸ್ತುಸಂಗ್ರಹಾಲಯಗಳ ಅಭಿವೃದ್ಧಿ ಯೋಜನೆ :**

ಈ ಇಲಾಖೆಯ ವ್ಯಾಪ್ತಿಯಲ್ಲಿ 14 ಸಂಗ್ರಹಾಲಯಗಳು ಮತ್ತು 2 ಕಲಾ ಗ್ಯಾಲರಿಗಳಿದ್ದು, ಈ ವಸ್ತುಸಂಗ್ರಹಾಲಯಗಳಲ್ಲಿ ಮೂಲಭೂತ ಪ್ರಕಾರ್ಯವಾದ ಅನ್ವೇಷಣೆ, ಉತ್ಖನನ ಸಮಯದಲ್ಲಿ ದೊರೆತ ಹಾಗೂ ವಿವಿಧ ಮೂಲಗಳಿಂದ ಸಂಗ್ರಹಿಸಿದ ಪ್ರಾಚೀನ ವಾಸ್ತುಶಿಲ್ಪ, ಮೂರ್ತಿಗಳು, ನಾಣ್ಯಗಳು, ಅಪೂರ್ವ ಕಲಾಕೃತಿಗಳು, ಫಿರಂಗಿ, ಮದ್ದು ಗುಂಡುಗಳು, ಮಡಿಕೆಚೂರು ಮುಂತಾದ ಪ್ರಾಚೀನ ಪರಿಕರಗಳನ್ನು ವ್ಯವಸ್ಥಿತವಾಗಿ ಪ್ರದರ್ಶಿಸಲಾಗುತ್ತಿದೆ. ವಸ್ತು ಸಂಗ್ರಹಾಲಯಗಳ ವಾರ್ಷಿಕ ನಿರ್ವಹಣೆ ಹಾಗೂ ಅಭಿವೃದ್ಧಿ ಕಾರ್ಯಗಳನ್ನು ಹಮ್ಮಿಕೊಳ್ಳಲಾಗಿದೆ.

**ಲೆಕ್ಕಶೀರ್ಷಿಕೆ:2205–00–107–0–01 – 059 ಇತರೆ ಖರ್ಚುಗಳು**

| ಕ್ರ.ಸಂ | ಕಾಮಗಾರಿಗಳ ವಿವರ | ವೆಚ್ಚ |
|---|---|---|
| | **ಮುಂದುವರೆದ ಕಾಮಗಾರಿಗಳು** | |
| | **ಮೈಸೂರು ವಿಭಾಗ** | |
| 1 | ಮೈಸೂರುನಗರ ವೆಲ್ಲಿಂಗ್‌ಟನ್ ವಸ್ತುಸಂಗ್ರಹಾಲಯದ ಉದ್ಯಾನವನ ನಿರ್ಮಾಣ ಮತ್ತು ಅಭಿವೃದ್ಧಿ ಕೆಲಸ | 5.50 |
| 2 | ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ಚಾಮರಾಜೇಂದ್ರ ಸ್ಮರಣಾರ್ಥ ಸರ್ಕಾರಿ ವಸ್ತು ಸಂಗ್ರಹಾಲಯದ ಕಟ್ಟಡ ನಿರ್ಮಾಣ ಮತ್ತು ಅಭಿವೃದ್ಧಿ ಕೆಲಸ | 17.56 |
| 3 | ಮಡಿಕೇರಿ ಜಿಲ್ಲೆ, ಮಡಿಕೇರಿಯಲ್ಲಿರುವ ಸರ್ಕಾರಿ ವಸ್ತುಸಂಗ್ರಹಾಲಯದ ಅಭಿವೃದ್ಧಿ ಕೆಲಸ | 2.93 |
| 4 | ಮಂಗಳೂರು ಜಿಲ್ಲೆ ಬಿಜೈನಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯದ ಅಭಿವೃದ್ಧಿ ಕಾಮಗಾರಿ ಹಾಗೂ ಉದ್ಯಾನವನದ ನಿರ್ಮಾಣದ ನಿರ್ವಹಣೆ. | 28.36 |
| | **ಒಟ್ಟು – ಮೈಸೂರು ವಿಭಾಗ** | **54.35** |
| | **ಬೆಂಗಳೂರು ವಿಭಾಗ** | |
| 5 | ಬೆಂಗಳೂರು ಕಸ್ತೂರಿ ಬಾ ರಸ್ತೆಯಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯದ ಪೂರಕ ಕಟ್ಟಡದ ಮೊದಲ ಮಹಡಿಯಲ್ಲಿ ಪುರಾತತ್ವ ಸಂಗ್ರಹಗಳ ಕೊಠಡಿ ಅಭಿವೃದ್ಧಿ ಕಾಮಗಾರಿ. | 2.21 |
| 6 | ಶಿವಮೊಗ್ಗ ಜಿಲ್ಲೆ, ಶಿವಪ್ಪನಾಯಕನ ಅರಮನೆ ಹಿಂಭಾಗದ ಕಟ್ಟಡದ ಅಭಿವೃದ್ಧಿ ಕಾಮಗಾರಿ. (ಹಂತ 2) | 21.30 |
| | ಒಟ್ಟು – ಬೆಂಗಳೂರು ವಿಭಾಗ | **23.51** |
| | ಬೆಳಗಾಂ/ಗುಲ್ಬರ್ಗ ವಿಭಾಗ | |
| 7 | ಗದಗ ಜಿಲ್ಲೆ ಗದಗದಲ್ಲಿರುವ ವಸ್ತು ಸಂಗ್ರಹಾಲಯ ಮತ್ತು ಉದ್ಯಾನವನ ನಿರ್ವಹಣಾ ಕಾಮಗಾರಿ | 3.46 |
| 8 | ಬೆಳಗಾವಿ ಜಿಲ್ಲೆ ಕಿತ್ತೂರಿನಲ್ಲಿರುವ ವಸ್ತು ಸಂಗ್ರಹಾಲದ ನಿರ್ವಹಣಾ ಕಾಮಗಾರಿ | 0.36 |
| 9 | ಬೆಳಗಾವಿ ಜಿಲ್ಲೆ ಕಿತ್ತೂರಿನಲ್ಲಿರುವ ಅರಮನೆ ಮತ್ತು ಉದ್ಯಾನವನ ನಿರ್ವಹಣಾ ಕಾಮಗಾರಿ | 1.86 |
| 10 | ಕಲಬುರ್ಗಿ ಜಿಲ್ಲೆ, ಕಲಬುರ್ಗಿಯಲ್ಲಿರುವ ವಸ್ತು ಸಂಗ್ರಹಾಲಯದ ನಿರ್ವಹಣಾ ಕಾಮಗಾರಿ | 3.25 |
| | ಒಟ್ಟು – ಬೆಳಗಾಂ/ಗುಲ್ಬರ್ಗ ವಿಭಾಗ | **8.93** |
| | ಒಟ್ಟು ಮುಂದುವರೆದ ಕಾಮಗಾರಿಗಳು | **86.79** |
| | ಒಟ್ಟಾರೆ 059 ಇತರೆ ಖರ್ಚುಗಳು | **86.79** |

| | | |
|---|---|---|
| | 200 ನಿರ್ವಹಣೆ | |
| | ಮುಂದುವರೆದ ಕಾಮಗಾರಿಗಳು | |
| | **ಬೆಂಗಳೂರು/ಬಳ್ಳಾರಿ ವಿಭಾಗ** | |
| 1 | ಬೆಂಗಳೂರಿನ ಕಸ್ತೂರಿಬಾ ರಸ್ತೆಯಲ್ಲಿರುವ ವೆಂಕಟಪ್ಪ ಚಿತ್ರಶಾಲೆಯ ಆವರಣದಲ್ಲಿನ ಉದ್ಯಾನವನ ನಿರ್ವಹಣೆ ಮತ್ತು ಅಭಿವೃದ್ಧಿ ಕಾಮಗಾರಿ ಕೆಲಸ | 11.54 |
| 2 | ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ ತಾಲ್ಲೂಕುನಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯದ ಉದ್ಯಾನವನ ನಿರ್ವಹಣೆ ಕಾಮಗಾರಿ ಕೆಲಸ. | 2.51 |
| 3 | ಚಿತ್ರದುರ್ಗ ಜಿಲ್ಲೆ ಚಿತ್ರದುರ್ಗ ತಾಲ್ಲೂಕುನಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯದ ಉದ್ಯಾನವನ ನಿರ್ವಹಣೆ ಕಾಮಗಾರಿ ಕೆಲಸ. | 1.76 |
| 4 | ಬಳ್ಳಾರಿ ಜಿಲ್ಲೆ ಹೂವಿನಹಡಗಲಿ ತಾಲ್ಲೂಕಿನಲ್ಲಿರುವ ಹೂವಿನಹಡಗಲಿ ಸರ್ಕಾರಿ ವಸ್ತು ಸಂಗ್ರಹಾಲಯದ ಉದ್ಯಾನವನ ನಿರ್ವಹಣೆ ಕಾಮಗಾರಿ ಕೆಲಸ. | 5.00 |
| | ಒಟ್ಟು – ಬೆಂಗಳೂರು/ಬಳ್ಳಾರಿ ವಿಭಾಗ | **20.81** |
| | **ಬೆಳಗಾಂ/ಗುಲ್ಬರ್ಗ ವಿಭಾಗ** | |
| 5 | ಗದಗ ಜಿಲ್ಲೆ, ಗದಗ ಸರ್ಕಾರಿ ವಸ್ತು ಸಂಗ್ರಹಾಲಯದ ಮಹಾದ್ವಾರದ ಕಾಮಗಾರಿ. | 8.58 |
| | **ಒಟ್ಟು – ಬೆಳಗಾಂ/ಗುಲ್ಬರ್ಗ ವಿಭಾಗ** | **8.58** |
| | **ಒಟ್ಟು – ಮುಂದುವರೆದ ಕಾಮಗಾರಿಗಳು** | **29.39** |
| | **ಹೊಸ ಕಾಮಗಾರಿಗಳು** | |
| | **ಬೆಳಗಾಂ/ಗುಲ್ಬರ್ಗ ವಿಭಾಗ** | |
| 1 | ಕಿತ್ತೂರು ಕೋಟೆ ಆವರಣದಲ್ಲಿರುವ ಉದ್ಯಾನವನದ ನಿರ್ವಹಣೆ ಹಾಗೂ ಅಭಿವೃದ್ಧಿ. | 4.90 |
| | **– ಬೆಳಗಾಂ/ಗುಲ್ಬರ್ಗ ವಿಭಾಗ** | **4.90** |
| | **– ಹೊಸ ಕಾಮಗಾರಿಗಳು** | **4.90** |
| | **ಇತರೆ ಕಾರ್ಯಕ್ರಮಗಳು** | |
| 1 | ಸಹಾಯಕ ನಿರ್ದೇಶಕರು, ಕ್ಯೂರೇಟರ್ ಮತ್ತು ಸಹಾಯಕ ಕ್ಯೂರೇಟರ್‌ರವರ ಮೇಲ್ವೀಚಾರಣೆಯಲ್ಲಿ ಇಲಾಖೆಯ ಅಧೀನದಲ್ಲಿ ಬರುವ ಸರ್ಕಾರಿ ವಸ್ತು ಸಂಗ್ರಹಾಲಯಗಳಲ್ಲಿ ಕಲಾಕೃತಿಗಳನ್ನು ಪ್ರದರ್ಶಿಸಲು ವುಡನ್ ಫೆಡಸ್ಟಲ್ (ಷೋಕೇಸ್)ಗಳನ್ನು ಅಳವಡಿಸುವುದು ಹಾಗೂ ವಸ್ತು ಸಂಗ್ರಹಾಲಯಗಳ ಮೂಲಭೂತ ಸೌಕರ್ಯಗಳ ನಿರ್ವಹಣೆಗೆ. | 11.24 |
| 1 | ಬೆಂಗಳೂರು ಕಸ್ತೂರಿ ಬಾ ರಸ್ತೆಯಲ್ಲಿರುವ ವೆಂಕಟಪ್ಪ ಚಿತ್ರಶಾಲೆ ಕಟ್ಟಡದಲ್ಲಿ ಹಿಂಭಾಗದಲ್ಲಿ ಒಂದನೆ ಮಹಡಿ ಹಾದು ಹೋಗುವ ಹಾಗೆ ಕಬ್ಬಿಣದ ಮೆಟ್ಟಿಲುಗಳನ್ನು (ಖಾಜಚು ಖಾಚಿಊಛಿಚಿಜ) ಅಗತ್ಯವಿರುವ ಸಾಮಾಗ್ರಿ ಸರಬರಾಜು ಕೆಲಸ. | 0.98 |
| 2 | ಬೆಂಗಳೂರು ಕಸ್ತೂರಿ ಬಾ ರಸ್ತೆಯಲ್ಲಿರುವ ವೆಂಕಟಪ್ಪ ಚಿತ್ರಶಾಲೆ ಕಟ್ಟಡದಲ್ಲಿ | 0.94 |

| | | |
|---|---|---|
| | ಹಿಂಭಾಗದಲ್ಲಿನ ಒಂದನೇ ಮಹಡಿಗೆ ಹಾದು ಹೋಗುವ ಸಲುವಾಗಿ ಕಬ್ಬಿಣದ ಮೆಟ್ಟಿಲುಗಳನ್ನು (ಖಾಜಷು ಖಾಚಿಖಿಭಿಚಿಜ) ನಿರ್ಮಿಸುವ ಕಾಮಗಾರಿ ಕೆಲಸ. | |
| | **ಒಟ್ಟು – ಇತರೆ ಕಾರ್ಯಕ್ರಮಗಳು** | **13.16** |
| | **ಒಟ್ಟಾರೆ 200 ನಿರ್ವಹಣೆ** | **47.45** |
| | **ಒಟ್ಟಾರೆ 2205–00–107–0–01 – 059 & 200** | **134.24** |

**ಲೆಕ್ಕಶೀರ್ಷಿಕೆ: 4202–04–101–0–02 ಪುರಾತತ್ವ ಮತ್ತು ವಸ್ತುಸಂಗ್ರಹಾಲಯಗಳು ಯೋಜನೆ 139 ಪ್ರಧಾನ ಕಾಮಗಾರಿಗಳು**

| ಕ್ರ. ಸಂ | ಕಾಮಗಾರಿಗಳ ವಿವರ | ವೆಚ್ಚ |
|---|---|---|
| | **ಮುಂದುವರೆದ ಕಾಮಗಾರಿಗಳು** | |
| 1 | ಸಂಸ್ಕೃತಿ ಸಂಗ್ರಹಾಲಯದ ನಿವೇಶನ – ಬೆಂಗಳೂರು ನಗರದ ವಿಜಯನಗರದಲ್ಲಿರುವ ಸರ್.ಎಂ.ವಿಶ್ವೇಶ್ವರಯ್ಯ ಬಡಾವಣೆ, ಸಿಎ ಸೈಟ್ ನಂ. 12, 3ನೇ ಬ್ಲಾಕ್‌ನಲ್ಲಿ ಖಾಲಿ ಇರುವ ಜಾಗಕ್ಕೆ ಆವರಣ ಗೋಡೆ ನಿರ್ಮಾಣ. | 14.03 |
| | **ಒಟ್ಟು ಸಂಸ್ಕೃತಿ ಸಂಗ್ರಹಾಲಯ ವಿಭಾಗ** | **14.03** |
| | **ಮೈಸೂರು ವಿಭಾಗ** | |
| 2 | ಹಾಸನ ವಸ್ತುಸಂಗ್ರಹಾಲಯದ ಕಟ್ಟಡ ನಿರ್ಮಾಣ. | 100.52 |
| | **ಒಟ್ಟು ಮೈಸೂರು ವಿಭಾಗ** | **100.52** |
| | **ಬೆಂಗಳೂರು/ಬಳ್ಳಾರಿ ವಿಭಾಗ** | |
| 3 | ಬೆಂಗಳೂರು ವಸ್ತು ಸಂಗ್ರಹಾಲಯದ ಆವರಣದ ಡಾಂಬರೀಕರಣದ ಕಾಮಗಾರಿ | 7.69 |
| | **ಬೆಂಗಳೂರು/ಬಳ್ಳಾರಿ ವಿಭಾಗ** | **7.69** |
| | **ಬೆಳಗಾಂ/ಗುಲ್ಬರ್ಗ ವಿಭಾಗ** | |
| 4 | ಗದಗ ಜಿಲ್ಲೆ, ಗದಗ ಸರ್ಕಾರಿ ವಸ್ತು ಸಂಗ್ರಹಾಲಯದ ಒಂದನೇ ಮಹಡಿ ಕಟ್ಟಡದ ಕಾಮಗಾರಿ. | 24.21 |
| | **ಒಟ್ಟು ಬೆಳಗಾಂ/ಗುಲ್ಬರ್ಗ ವಿಭಾಗ** | **24.21** |
| | **ಒಟ್ಟಾರೆ ಮುಂದುವರೆದ ಕಾಮಗಾರಿಗಳು** | **146.45** |
| | **ಹೊಸ ಕಾಮಗಾರಿಗಳು:–** | |
| | **ಮೈಸೂರು ವಿಭಾಗ** | |
| 1 | ಮೈಸೂರು ಕೇಂದ್ರ ಕಛೇರಿಯ ಆವರಣದಲ್ಲಿ ಮಿಟಿಂಗ್ ಹಾಲ್ ನಿರ್ಮಾಣ. | 10.78 |
| 2 | ಮೈಸೂರಿನ ಕೇಂದ್ರ ಕಛೇರಿಯ ಆಡಿಟೋರಿಯಂನ ಬಳಭಾಗದ ಸುತ್ತಲಿನ ಪ್ಯಾನಲ್ ಗೋಡೆಯ ದಸರಾ ಮೆರವಣಿಗೆಯ ವಿವಿಧ ಹಂತಗಳ ಫೈಬರ್ ಮೋಲ್ಡೆಡ್ ಬೋರ್ಡ್‌ನ್ನು ತಯಾರಿಸಿ ಅಳವಡಿಸುವ ಕೆಲಸ | 4.94 |

| | | |
|---|---|---|
| 3 | ಮೈಸೂರಿನ ಕೇಂದ್ರ ಕಛೇರಿಯ ಆವರಣದಲ್ಲಿರುವ ಸೋಲಾರ್ ದ್ವೀಪದ ನಿರ್ವಹಣೆ, ಸೋಲಾರ್ ಬ್ಯಾಟರಿ ನಿರ್ವಹಣೆ ಹಾಗೂ ಆಂತರಿಕ ವಿದ್ಯುತ್ತೀಕರಣ ಎಲ್‌ಇಡಿ ಲೈಟ್ ಅಳವಡಿಸುವುದು ಮತ್ತು ಕಟ್ಟಡದ ವಾರ್ಷಿಕ ನಿರ್ವಹಣೆ. | 11.97 |
| | **ಒಟ್ಟು ಮೈಸೂರು ವಿಭಾಗ** | **27.69** |
| | **ಬೆಂಗಳೂರು/ಬಳ್ಳಾರಿ ವಿಭಾಗ** | |
| 4 | ಬೆಂಗಳೂರು ವೆಂಕಟಪ್ಪ ಚಿತ್ರಶಾಲೆಯ ಹಿಂಭಾಗ ಕಸ್ತೂರಬಾ ರಸ್ತೆಗೆ ಸಂಪರ್ಕ ಕಲ್ಪಿಸಲು ಮಳೆನೀರು ಕಾಲುವೆಗೆ ಅಡ್ಡಲಾಗಿ ಸೇತುವೆ ನಿರ್ಮಾಣ. | 25.00 |
| | **ಬೆಳಗಾಂ/ಗುಲ್ಬರ್ಗ ವಿಭಾಗ** | |
| 5 | ಬೀದರ ಜಿಲ್ಲೆ, ಬಸವಕಲ್ಯಾಣದಲ್ಲಿರುವ ಸರ್ಕಾರಿ ವಸ್ತು ಸಂಗ್ರಹಾಲಯ ಅಭಿವೃದ್ಧಿ ಮತ್ತು ವಿಕಲಚೇತನರಿಗೆ ಅಡೆ-ತಡೆ ರಹಿತ ವಾತಾವರಣ ನಿರ್ಮಿಸುವ ಕಾಮಗಾರಿ | 9.59 |
| 6 | ಕಲಬುರ್ಗಿ ಜಿಲ್ಲೆ, ಕಲಬುರ್ಗಿ ನಗರದಲ್ಲಿ ಸರ್ಕಾರಿ ವಸ್ತು ಸಂಗ್ರಹಾಲಯಕ್ಕೆ ವಿಕಲಚೇತನರಿಗೆ ಅಡೆ-ತಡೆ ರಹಿತ ವಾತಾವರಣ ನಿರ್ಮಿಸುವ್ ಕಾಮಗಾರಿ | 4.17 |
| 7 | ಗದಗ ವಸ್ತುಸಂಗ್ರಹಾಲಯದ ವಿದುಚ್ಚಕ್ತಿ ಕಾಮಗಾರಿ ಕೆಲಸ. | 4.00 |
| | **ಒಟ್ಟು ಬೆಳಗಾಂ/ಗುಲ್ಬರ್ಗ ವಿಭಾಗ** | **42.76** |
| | **ಒಟ್ಟಾರೆ ಹೊಸ ಕಾಮಗಾರಿಗಳು** | **70.45** |
| | **ಒಟ್ಟಾರೆ 4202-04-101-0-02 (ಯೋಜನೆ)** | **216.90** |

**22. ಯೋಜನೇತರ ಕಾರ್ಯಕ್ರಮಗಳು :**

| ಕ್ರ. ಸಂ | ಕಾಮಗಾರಿಗಳ ವಿವರ | ವೆಚ್ಚ |
|---|---|---|
| | **ಸಂರಕ್ಷಣಾ ಕಾಮಗಾರಿಗಳು** | |
| 1 | ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕು ಹಿರೇಹಳ್ಳಿ ಗ್ರಾಮದಲ್ಲಿರುವ ಶ್ರೀ ಗಜೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ. | 21.68 |
| 2 | ಹಾವೇರಿ ಜಿಲ್ಲೆ ಬ್ಯಾಡಗಿ ತಾಲ್ಲೂಕು ಹಿರೇಹಣಜಿ ಗ್ರಾಮದಲ್ಲಿರುವ ಶ್ರೀ ಕಲ್ಮೇಶ್ವರ ಹಾಗೂ ಮಲ್ಲೇಶ್ವರ ದೇವಾಲಯದ ಸಂರಕ್ಷಣಾ ಕಾಮಗಾರಿ. | 8.77 |
| | **ಒಟ್ಟು** | **30.45** |

ಯೋಜನೇತರ ಬಾಬ್ತಿನಡಿಯಲ್ಲಿ 2 ಸಂರಕ್ಷಣಾ ಕಾಮಗಾರಿಗಳನ್ನು **ರೂ.30.45 ಲಕ್ಷಗಳ** ವೆಚ್ಚದಲ್ಲಿ ಕೈಗೊಳ್ಳಲಾಗಿದೆ.

**23. ಖಾಸಗೀ ಸಹಭಾಗಿತ್ವದ ಯೋಜನೆ :**

ಧರ್ಮಸ್ಥಳದ ಧರ್ಮೋತ್ಥಾನ ಟ್ರಸ್ಟ್ ಸಹಯೋಗದೊಂದಿಗೆ ಸ್ಮಾರಕಗಳ ಸಂರಕ್ಷಣೆ ಸರ್ಕಾರದ ಆದೇಶ ಸಂಖ್ಯೆ:ಕಸಂವಾ 192 ಕೆಎಂಯು 2016 ಬೆಂಗಳೂರು ದಿನಾಂಕ:05.10.2016ರ ಮೇರೆಗೆ 12 ಸ್ಮಾರಕಗಳ ಸಂರಕ್ಷಣೆಗಾಗಿ ರೂ.91.71 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**24. ಬಾಹ್ಯ ಸಂಸ್ಥೆಯ ಮೂಲಕ ಅಗತ್ಯ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿರುವುದು:-**

ಈ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ರಾಜ್ಯ ಸಂರಕ್ಷತ ಸ್ಮಾರಕಗಳಿಗೆ ಹಾಗೂ ವಸ್ತುಸಂಗ್ರಹಾಲಯಗಳಿಗೆ ಭದ್ರತಾ ಸಿಬ್ಬಂದಿಯನ್ನು ನಿಯಮಾನುಸಾರ ಟೆಂಡರ್ ಕರೆದು ಬಾಹ್ಯ ಸಂಸ್ಥೆಯ ಮೂಲಕ ನೇಮಕ ಮಾಡಿಕೊಳ್ಳಲಾಗಿದೆ. ಹಾಗೂ ಆಡಳಿತಾತ್ಮ ಹಿತದೃಷ್ಟಿಯಿಂದ ಕಛೇರಿ ಕೆಲಸ ಕಾರ್ಯಗಳಿಗೆ ನಿಯಮಾನುಸಾರ ಈ ಕೆಳಕಂಡ ಸಿಬ್ಬಂದಿಗಳ ಸೇವೆಯನ್ನು ಬಾಹ್ಯ ಸಂಸ್ಥೆಯ ಮೂಲಕ ಪಡೆಯಲಾಗುತ್ತಿದೆ.

| ಕ್ರ.ಸಂ | ಬಾಹ್ಯ ಮೂಲದಿಂದ ಪಡೆದ ಸಿಬ್ಬಂದಿಯ ಪದನಾಮ | ವೃಂದ | ಹುದ್ದೆಗಳ ಸಂಖ್ಯೆ |
|---|---|---|---|
| 1 | ಪುರಾತತ್ವ ಸಂರಕ್ಷಣಾ ಸಹಾಯಕರು | ಸಿ | 01 |
| 2 | ಛಾಯಾಗ್ರಾಹಕರು | ಸಿ | 01 |
| 3 | ಅಕ್ಷರಸ್ತ ಸಹಾಯಕರು | ಸಿ | 01 |
| 4 | ಕಂಪ್ಯೂಟರ್ ಆಪರೇಟರ್ಸ್ | ಸಿ | 05 |
| 5 | ವಾಹನ ಚಾಲಕರು | ಸಿ | 04 |
| 6 | ಭದ್ರತಾ ಸಿಬ್ಬಂದಿ | ಡಿ | 104 |
| 7 | ಗ್ರೂಪ್-ಡಿ | ಡಿ | 05 |
| | | **ಒಟ್ಟು** | **121** |

**25. ಗೃಹರಕ್ಷಕ ದಳದ ಸಿಬ್ಬಂದಿ:-**

ಹಂಪಿ ವಿಶ್ವ ಪರಂಪರೆ ರಾಜ್ಯ ಸಂರಕ್ಷಿತ ಪ್ರದೇಶ ಹಾಗೂ ಆನೆಗೊಂದಿಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಐತಿಹಾಸಿಕ ಸ್ಮಾರಕಗಳ ಸಂರಕ್ಷಣೆಗಾಗಿ 40 ಗೃಹರಕ್ಷಕ ದಳದ ಸಿಬ್ಬಂದಿಗಳನ್ನು ಮಹಾನಿರ್ದೇಶಕರು ಗೃಹರಕ್ಷಕ ದಳ, ಬೆಂಗಳೂರು ಇವರಿಂದ ಸರ್ಕಾರದ ಆದೇಶದ ಸಂಖ್ಯೆ:ಕಸಂವಾ 77 ಕೆಎಂಯು 2016 ದಿನಾಂಕ:19.08.2016ರ ಮೇರೆಗೆ ಸೇವೆಯನ್ನು ಪಡೆಯಲಾಗುತ್ತಿದೆ.

**26. ಸಹಾಯಾನುದಾನ:**

**1) ಹಂಪಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆಗೆ :-**

2016-17ನೇ ಆರ್ಥಿಕ ಸಾಲಿನಲ್ಲಿ ಹಂಪಿ ಅಭಿವೃದ್ಧಿ ಪ್ರದೇಶ ನಿರ್ವಹಣಾ ಪ್ರಾಧಿಕಾರದ ನಿರ್ವಹಣೆಗೆ ಯೋಜನೆ ಬಾಬ್ತಿನಲ್ಲಿ ರೂ.58.00 ಲಕ್ಷವನ್ನು ಯೋಜನೇತರ ಬಾಬ್ತಿನಡಿಯಲ್ಲಿ ರೂ.40.00ಲಕ್ಷವನ್ನು ಸರ್ಕಾರಿ ಆದೇಶದ ಮೇರೆಗೆ ಸಹಾಯಾನುದಾನದ ರೂಪದಲ್ಲಿ ಬಿಡುಗಡೆ ಮಾಡಲಾಗಿದೆ.

**2) ಸಹ್ಯಾದ್ರಿ ಅಭಿವೃದ್ಧಿ ಪ್ರಾಧಿಕಾರದ ನಿರ್ವಹಣೆಗೆ:-**

2016-17ನೇ ಆರ್ಥಿಕ ಸಾಲಿನಲ್ಲಿ ಸಹ್ಯಾದ್ರಿ ಅಭಿವೃದ್ಧಿ ಪ್ರಾಧಿಕಾರದ ನಿರ್ವಹಣೆಗೆ ಸರ್ಕಾರದ ಅನುಮತಿ ಮೇರೆಗೆ ಯೋಜನೆಯ ಬಾಬ್ತಿನಲ್ಲಿ ರೂ.5.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

**27. ರಾಜಸ್ವ ಸ್ವೀಕೃತಿ :**

2016-17ನೇ ಸಾಲಿನಲ್ಲಿ ವಿವಿಧ ಮೂಲಗಳಿಂದ ಈ ಕೆಳಕಂಡಂತೆ ರಾಜಸ್ವ ಸ್ವೀಕೃತಿಯನ್ನು ಮಾಡಲಾಗಿದೆ.

| ಕ್ರಮ ಸಂಖ್ಯೆ | ವಿವಿಧ ಮೂಲಗಳು | ರಾಜಸ್ವ ಸ್ವೀಕೃತಿ ರೂ. ಲಕ್ಷಗಳಲ್ಲಿ |
|---|---|---|
| 1) | ವಸ್ತುಸಂಗ್ರಹಾಲಯಗಳ ಪ್ರವೇಶ ದರ ಹಾಗೂ ಇತರ ಬಾಬ್ತಿನಿಂದ ಬಂದ ಮೊಬಲಗು | |
| | ಪ್ರವೇಶ ಶುಲ್ಕ (ಬೆಂಗಳೂರು ಮತ್ತು ಮಂಗಳೂರು) | 9.13 |
| | ಸಭಾಂಗಣ ಬಾಡಿಗೆ (ವೆಂಕಟಪ್ಪ ಚಿತ್ರಶಾಲೆ) | 2.31 |
| | ಕಟ್ಟಡ ಬಾಡಿಗೆ (ಬೆಂಗಳೂರು ವಸ್ತುಸಂಗ್ರಹಾಲಯ) | 2.22 |
| 2) | ಸಂಶೋಧನಾ ಪ್ರಕಟಣೆಗಳ ಮಾರಾಟದಿಂದ ಬಂದ ಮೊಬಲಗು (ಎಲ್ಲಾ ವಸ್ತುಸಂಗ್ರಹಾಲಯಗಳು ಹಾಗೂ ಕಛೇರಿಗಳಲ್ಲಿ ಪುಸಕ್ತ ಮಾರಾಟದಿಂದ) | 3.89 |
| 3) | ಸ್ಮಾರಕಗಳ ಬಳಿ ಚಲನಚಿತ್ರ/ಧಾರವಾಹಿ/ಸಾಕ್ಷ್ಯಚಿತ್ರ ಚಿತ್ರೀಕರಣದ ಸೇವಾ ಶುಲ್ಕ ಬಾಬ್ತು. | 0.71 |
| 4) | ಮಾಹಿತಿ ಹಕ್ಕು ಅಧಿನಿಯಮದಡಿ ಸ್ವೀಕೃತವಾದ ಮೊಬಲಗು | 0.07 |
| | **ಒಟ್ಟು ರೂ.** | **18.33** |

**28. ಇಲಾಖೆಯ ಪಿ.ಡಿ.ಖಾತೆ :**

ಸರ್ಕಾರದ ಆದೇಶ ಸಂಖ್ಯೆ:ಆಇ/35/ಟಿಎಆರ್/2016 ಬೆಂಗಳೂರು ದಿನಾಂಕ:08.08.2016ರಲ್ಲಿ ಆಯುಕ್ತರು, ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ಇವರ ವೈಯಕ್ತಿಕ ಠೇವಣಿ ಖಾತೆಯ ಸಂಖ್ಯೆ:06000001ನ್ನು ಲೆಕ್ಕಶೀರ್ಷಿಕೆ 8443-00-106-3-18ರಲ್ಲಿ ರೂ.8,56,05,416/- (ಎಂಟು ಕೋಟಿ ಐವತ್ತಾರು ಲಕ್ಷದ ಐದು ಸಾವಿರದ ನಾಲ್ಕು ನೂರ ಹದಿನಾರು ರೂಪಾಯಿ)ಗಳನ್ನು **ದಿನಾಂಕ:01.04.2016ರಿಂದ 31.03.2017ರವರೆಗೆ ಮುಂದುವರೆಸಲಾಗಿದೆ.**

ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಸ್ಮಾರಕಗಳ ಸಂರಕ್ಷಣೆಗೆ ರೂ.274.75ಲಕ್ಷಗಳ ಅನುದಾನವನ್ನು 31 ಮಾರ್ಚ್ 2017ರಂದು ಇಲಾಖೆಗೆ ಬಿಡುಗಡೆ ಮಾಡಿರುತ್ತಾರೆ.

ಪ್ರಸಕ್ತ ಸಾಲಿನಲ್ಲಿ ಈ ಕೆಳಕಂಡ ಸಂರಕ್ಷಣಾ ಕಾಮಗಾರಿಗಳನ್ನು ಕೈಗೊಂಡು ಹಣ ಪಾವತಿಸಲಾಗಿದೆ.

| ಕ್ರ.ಸಂ | ಕಾಮಗಾರಿಯ ವಿವರಗಳು | ಪಾವತಿಸಿದ ಮೊಬಲಗು (ರೂ.ಲಕ್ಷಗಳಲ್ಲಿ) |
|---|---|---|
| 1 | ರಾಮನಗರ ಜಿಲ್ಲೆ, ಮಾಗಡಿ ತಾ॥, ಮಾಗಡಿ ಕೋಟೆಯ ಸಂರಕ್ಷಣೆ | 35.97 |
| 2 | ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್ ಮಂಡಳಿಯ ಅಭಿವೃದ್ಧಿ ಕಾಮಗಾರಿಗಳು | |
| | ಅ) ಸುಗಂದದ ಎಣ್ಣೆ ಕಾರ್ಖಾನೆ ಕಟ್ಟಡ ಸಂರಕ್ಷಣೆ | 13.36 |
| | ಆ) ಆರ್ಟ್ ಸ್ಟುಡಿಯೋ ಕಟ್ಟಡ ಸಂರಕ್ಷಣೆ | 3.32 |
| 3 | ಬೆಂಗಳೂರು ಲಾಲ್‌ಬಾಗ್ ತೋಟದಲ್ಲಿರುವ ಗ್ರಂಥಾಲಯದ ಕಟ್ಟಡ ನವೀಕರಣ ಕಾಮಗಾರಿ | 19.40 |
| 4 | ಬೆಂಗಳೂರು ನಗರದ ಕಬ್ಬನ್‌ಪಾರ್ಕ್‌ನಲ್ಲಿರುವ ಐತಿಹಾಸಿಕ ಪ್ರತಿಮೆಗಳ ಸಂರಕ್ಷಣಾ ಕೆಲಸ | 13.09 |
| 5 | ಮೈಸೂರು ನಗರದ ಸೆಂಟ್ ಫಿಲೋಮಿನಾ ಚರ್ಚ್‌ನ ಸಂರಕ್ಷಣಾ ಕೆಲಸ | 115.70 |
| | **ಒಟ್ಟು** | **200.84** |

**29. ಸಂರಕ್ಷಿತ ಸ್ಮಾರಕಗಳ ಘೋಷಣೆ :**

2016-17ನೇ ಸಾಲಿನಲ್ಲಿ ಈ ಕೆಳಕಂಡ ಸ್ಮಾರಕಗಳನ್ನು ಸಂರಕ್ಷಿತ ಸ್ಮಾರಕಗಳೆಂದು ಅಧಿಸೂಚಿಸಿದೆ.

- ಕೊಡಗು ಜಿಲ್ಲೆ, ವಿರಾಜಪೇಟೆ ತಾಲ್ಲೂಕು, ಅರಪಟ್ಟು ಗ್ರಾಮದಲ್ಲಿರುವ ಶ್ರೀ ಈಶ್ವರ ದೇವಾಲಯವನ್ನು "ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳ ಅಧಿನಿಯಮ 1961ರ ಕಲಂ 4(1)ರಡಿ" ರಾಜ್ಯ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸಲು ಅನುವಾಗುವಂತೆ ಪ್ರಾಥಮಿಕ ಅಧಿಸೂಚನೆಯನ್ನು **ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 122 ಕೆಎಂಯು 2016 ದಿನಾಂಕ:26.07.2016**ರಲ್ಲಿ ಹೊರಡಿಸಿರುತ್ತಾರೆ.

- ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಕೆಂಪಾಪುರ ಗ್ರಾಮದಲ್ಲಿರುವ ಹಿರಿಯ ಕೆಂಪೇಗೌಡರ ಸಮಾಧಿಯ ಸ್ಥಳವನ್ನು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳ ಅಧಿನಿಯಮ 1961ರ ಕಲಂ 4(3)ರಡಿ" ರಾಜ್ಯ ಸಂರಕ್ಷಿತ ಸ್ಮಾರಕವೆಂಬುದಾಗಿ **ಸರ್ಕಾರದ ಅಧಿಸೂಚನೆ ಸಂಖ್ಯೆ: ಕಸಂವಾ 209 ಕೆಎಂಯು 2015, ದಿನಾಂಕ 07.09.2016**ರಲ್ಲಿ ಘೋಷಣೆಯಾಗಿರುತ್ತದೆ.

- ಬಳ್ಳಾರಿ ಜಿಲ್ಲೆ, ಬಳ್ಳಾರಿ ನಗರದಲ್ಲಿರುವ ಅಲ್ಲಿಪುರಂ ಜೈಲನ್ನು ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳ ಅಧಿನಿಯಮ 1961ರ ಕಲಂ 4(3)ರಡಿ" ರಾಜ್ಯ ಸಂರಕ್ಷಿತ ಸ್ಮಾರಕವೆಂಬುದಾಗಿ **ಸರ್ಕಾರದ ಅಧಿಸೂಚನೆ ಸಂಖ್ಯೆ: ಕಸಂವಾ 166 ಕೆಎಂಯು 2015, ದಿನಾಂಕ 06.09.2016**ರಲ್ಲಿ ಘೋಷಣೆಯಾಗಿರುತ್ತದೆ.

- ಮಂಡ್ಯ ಜಿಲ್ಲೆ, ಮದ್ದೂರು ತಾಲ್ಲೂಕು, ಮದ್ದೂರು ಟೌನ್‌ನಲ್ಲಿರುವ ಶ್ರೀ ಉಗ್ರನರಸಿಂಹಸ್ವಾಮಿ ದೇವಾಲಯ ಹಾಗೂ ಶ್ರೀ ವರದರಾಜಸ್ವಾಮಿ ದೇವಾಲಯಗಳನ್ನು "ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳ ಅಧಿನಿಯಮ 1961ರ ಕಲಂ 4(1)ರಡಿ" ರಾಜ್ಯ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸಲು ಅನುವಾಗುವಂತೆ

ಪ್ರಾಥಮಿಕ ಅಧಿಸೂಚನೆಯನ್ನು **ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 165 ಕೆಎಂಯು 2016 ದಿನಾಂಕ:07.09.2016**ರಲ್ಲಿ ಹೊರಡಿಸಿರುತ್ತಾರೆ.

- ಕಲಬುರಗಿ ಜಿಲ್ಲೆ ಚಿಂಚೋಳಿ ತಾಲ್ಲೂಕು, ಮೋಘಾ ಗ್ರಾಮದಲ್ಲಿರುವ ಶ್ರೀ ರಾಮಲಿಂಗೇಶ್ವರ ದೇವಾಲಯವನ್ನು "ಕರ್ನಾಟಕ ಪ್ರಾಚೀನ ಮತ್ತು ಐತಿಹಾಸಿಕ ಸ್ಮಾರಕಗಳು ಮತ್ತು ಪುರಾತತ್ವ ನಿವೇಶನಗಳ ಅಧಿನಿಯಮ 1961ರ ಕಲಂ 4(1)ರಡಿ" ರಾಜ್ಯ ಸಂರಕ್ಷಿತ ಸ್ಮಾರಕವನ್ನಾಗಿ ಘೋಷಿಸಲು ಅನುವಾಗುವಂತೆ ಪ್ರಾಥಮಿಕ ಅಧಿಸೂಚನೆಯನ್ನು **ಸರ್ಕಾರದ ಅಧಿಸೂಚನೆ ಸಂಖ್ಯೆ:ಕಸಂವಾ 235 ಕೆಎಂಯು 2016 ದಿನಾಂಕ:03.03.2017**ರಲ್ಲಿ ಹೊರಡಿಸಿರುತ್ತಾರೆ.

**30. ಇಲಾಖೆಯ ವೆಬ್‌ಸೈಟ್:**

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆಯು ಈ ಇಲಾಖೆಗೆ ನೀಡಿರುವ ಸೈಟ್‌ಮ್ಯಾಪ್ ಮಾರ್ಗದರ್ಶನದನ್ವಯ ಇಲಾಖೆಯ ವೆಬ್‌ಸೈಟ್‌ನ್ನು ಅಭಿವೃದ್ಧಿಪಡಿಸಲಾಗಿದೆ. ಈ ವೆಬ್‌ಸೈಟ್‌ನಲ್ಲಿ ಇಲಾಖೆಯ ಇತಿಹಾಸ, ಇಲಾಖೆಯ ಪ್ರಮುಖ ಚಟುವಟಿಕೆಗಳು, ಕಳೆದ ಮೂರು ವರ್ಷಗಳಲ್ಲಿ ಇಲಾಖೆ ಸಾಧಿಸಿದ ಪ್ರಗತಿಯ ವಿವರಗಳು, ವಾರ್ಷಿಕ ವರದಿಗಳು, ಇಲಾಖೆಯ ಅಧಿನಿಯಮ ಮತ್ತು ಉಪ ನಿಯಮಗಳ ವಿವರ, ಇಲಾಖೆಯ ಪ್ರಕಟಣೆಯ ವಿವರಗಳು, ಸಾರ್ವಜನಿಕರ ಮಾಹಿತಿಗಾಗಿ ಪ್ರಕಟಿತ ಮಾಹಿತಿ ಹಕ್ಕು ಅಧಿನಿಯಮ 4 (1)ಎ ಮತ್ತು 4(1) ಬಿ, ನಾಗರೀಕ ಸನ್ನದ್ದು (citizen charter), ಇಲಾಖೆಯ ಸಂರಕ್ಷಿತ ಸ್ಮಾರಕಗಳ ನಿರ್ದೇಶಿಕೆ ಮತ್ತು ಈ ಸ್ಮಾರಕಗಳ ಸಂಕ್ಷಿಪ್ತ ವಿವರಗಳನ್ನೊಳಗೊಂಡ ಮಾಹಿತಿ, ಇಲಾಖೆಗೆ ಸಂಬಂಧಪಟ್ಟ ಪ್ರಮುಖ ಆದೇಶಗಳು, ಇಲಾಖೆಯ ಪ್ರಮುಖ ವಿದ್ಯಮಾನಗಳು (News & Event) , ಟೆಂಡರ್‌ಗಳ ಕುರಿತು ಮಾಹಿತಿ, ಸಾರ್ವಜನಿಕ ಆಕ್ಷೇಪಣೆ ಮತ್ತು ಮಾಹಿತಿಗಾಗಿ Query ಸಲ್ಲಿಸಬಹುದಾಗಿದೆ, ಎಫ್.ಎ.ಕ್ಯೂ ಇನ್ನಿತರ ಮಾಹಿತಿಯನ್ನು ಒಳಗೊಂಡಿರುತ್ತದೆ.

**31. ಪಾರಂಪರಿಕ ಸಮಿತಿ:**

2016-17ನೇ ಸಾಲಿನಲ್ಲಿ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿಗಳ ಮುಂದುವರೆದ ವಿವರಗಳು.

| ಕ್ರ.ಸಂ | ಸಮಿತಿಯ ವಿವರ | ಸರ್ಕಾರಿ ಆದೇಶ ಸಂಖ್ಯೆ | ಅವಧಿ | |
|---|---|---|---|---|
| | | | ಯಿಂದ | ಗೆ |
| 01 | ಮೈಸೂರು ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿ | ಸಮಿತಿಯ ಮುಂದುವರಿಕೆಗೆ ಸರ್ಕಾರಕ್ಕೆ ಪ್ರಸ್ತಾಪಿಸಿದೆ. | - | - |
| 02 | ಶ್ರೀರಂಗಪಟ್ಟಣ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿ | ಸರ್ಕಾರದ ಆದೇಶ ಸಂಖ್ಯೆ: ಕಸಂವಾ 189 ಕೆಎಂಯು 2016 ಬೆಂಗಳೂರು, ದಿನಾಂಕ 16.03.2017 | 01.04.2016 | 31.03.2018 |
| 03 | ಗುಲ್ಬರ್ಗಾ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿ | ಸಮಿತಿಯ ಮುಂದುವರಿಕೆಗೆ ಸರ್ಕಾರಕ್ಕೆ ಪ್ರಸ್ತಾಪಿಸಿದೆ. | - | - |

| | | | | |
|---|---|---|---|---|
| 04 | ಬೀದರ್ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿ | ಸರ್ಕಾರದ ಆದೇಶ ಸಂಖ್ಯೆ: ಕಸಂವಾ 238 ಕೆಎಂಯು 2016 ಬೆಂಗಳೂರು, ದಿನಾಂಕ 01.03.2017 | 10.12.2016 | 09.12.2018 |
| 05 | ಕಿತ್ತೂರು ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿ | ಸಮಿತಿಯ ಮುಂದುವರಿಕೆಗೆ ಸರ್ಕಾರಕ್ಕೆ ಪ್ರಸ್ತಾಪಿಸಿದೆ. | – | – |
| 06 | ಬಿಜಾಪುರ ಪಾರಂಪರಿಕ ಪ್ರದೇಶದ ಅಭಿವೃದ್ಧಿ ಮತ್ತು ತಜ್ಞರ ಸಮಿತಿ | ಸರ್ಕಾರದ ಆದೇಶ ಸಂಖ್ಯೆ: ಕಸಂವಾ 115 ಕೆಎಂಯು 2016 ಬೆಂಗಳೂರು, ದಿನಾಂಕ 18.03.2017 | 02.04.2016 | 01.04.2018 |
| 07 | ಬೆಂಗಳೂರು ಜಿಲ್ಲೆ, ಬೆಂಗಳೂರು ನಗರವನ್ನು ಪರಂಪರಾ ಪ್ರದೇಶವೆಂದು ಘೋಷಣೆ ಮಾಡಿರುವ ನಿಟ್ಟಿನಲ್ಲಿ ತಜ್ಞರ ಸಮಿತಿಯನ್ನು ರಚಿಸುವ ಬಗ್ಗೆ | ಸರ್ಕಾರದ ಆದೇಶ ಸಂಖ್ಯೆ: ಕಸಂವಾ 01 ಕೆಎಂಯು 2017 ಬೆಂಗಳೂರು, ದಿನಾಂಕ 16.03.2017 | – | – |

**32. ತಾಂತ್ರಿಕ ಸಲಹಾ ಸಮಿತಿ :–**

ಇಲಾಖೆಯ ಸಂರಕ್ಷಣಾ ಕಾಮಗಾರಿಯ ಅಂದಾಜು ಪಟ್ಟಿಗೆ ತಾಂತ್ರಿಕ ಮತ್ತು ಆಡಳಿತಾತ್ಮಕ ಮಂಜೂರಾತಿ ನೀಡುವ ಸಮಿತಿಯ ಅಧಿಕಾರೇತರ ಸದಸ್ಯರ ವಿವರಗಳು. ಸರ್ಕಾರದ ಆದೇಶದ ಸಂಖ್ಯೆ:ಕಸಂವಾ 111 ಕೆಎಂಯು 2015 ದಿನಾಂಕ:20.07.2015ರಲ್ಲಿ ದಿನಾಂಕ:01.04.2015ರಿಂದ 31.03.2018ರವರೆಗೆ **ಮೂರು ವರ್ಷಗಳ ಅವಧಿಗೆ ಮುಂದುವರೆಸಲಾಗಿದೆ.**

- ಶ್ರೀ ಬಿ.ಅಶ್ವತ್ಥನಾರಾಯಣ, ನಿವೃತ್ತ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ.
- ಡಾ॥ ಹೆಚ್.ಎಂ.ಸಿದ್ದನಗೌಡರ್, ನಿವೃತ್ತ ನಿರ್ದೇಶಕರು, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ.
- ಶ್ರೀ ವೆಂಕಟೇಶಯ್ಯ.ಎಸ್.ವಿ, ನಿವೃತ್ತ ಪ್ರಾದೇಶಿಕ ನಿರ್ದೇಶಕರು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ.

**33. ರೋರಿಕ್ ಮತ್ತು ದೇವಿಕಾರಾಣಿ ರೋರಿಕ್ ಎಸ್ಟೇಟ್‌ನ ಅಭಿವೃದ್ಧಿ ಕಾಮಗಾರಿ :**

ಬೆಂಗಳೂರಿನ ತಾತಗುಣಿಯಲ್ಲಿರುವ ರೋರಿಕ್ ಎಸ್ಟೇಟ್‌ನಲ್ಲಿ ಹೆಸರಾಂತ ಕಲಾವಿದರಾದ ರೋರಿಕ್ ಮತ್ತು ದೇವಿಕಾ ರಾಣಿ ರೋರಿಕ್ ದಂಪತಿಗಳು ವಾಸಿಸುತ್ತಿದ್ದ ಮನೆ ಹಾಗೂ ಸಮಾಧಿ ಸ್ಥಳಗಳ ಅಭಿವೃದ್ಧಿ ಕಾಮಗಾರಿಗಳನ್ನು ಇಲಾಖೆ ವತಿಯಿಂದ ಕೈಗೊಂಡು ಪೂರ್ಣಗೊಳಿಸಿದೆ.

2ನೇ ಹಂತದಲ್ಲಿ ಸ್ಟುಡಿಯೋ ಕಟ್ಟಡ, ಸುಗಂಧದ ಎಣ್ಣೆ ತೆಗೆಯುವ ಕಟ್ಟಡ ಹಾಗೂ ಸುಗಂಧದ ಎಣ್ಣೆ ಬೀಜಗಳನ್ನು ಒಣಗಿಸುವ ಕಟ್ಟಡಗಳ ಸಂರಕ್ಷಣಾ ಕಾಮಗಾರಿಯು ಕೈಗೊಳ್ಳಲಾಗಿದ್ದು, ಕಾಮಗಾರಿಯು ಪ್ರಗತಿಯಲ್ಲಿದೆ. ಈ ಎಸ್ಟೇಟ್‌ನಲ್ಲಿ ಸುಮಾರು 25 ಎಕರೆ

ಪ್ರದೇಶದಲ್ಲಿ ರಾಷ್ಟ್ರೀಯ ಮಟ್ಟದ ವಸ್ತುಸಂಗ್ರಹಾಲಯವನ್ನು ಸ್ಥಾಪಿಸಲು ಯೋಜನೆಯ ರೂಪು-ರೇಷೆಗಳನ್ನು ಸಿದ್ಧಪಡಿಸಲಾಗುತ್ತಿದೆ.

**34. ಗುಪ್ತನಿಧಿ :**

ಪ್ರಸಕ್ತ ಸಾಲಿನಲ್ಲಿ ಹಾಸನ ಜಿಲ್ಲೆ, ಹಾಸನ ತಾಲ್ಲೂಕು, ಬೈಲಹಳ್ಳಿ ಗ್ರಾಮದಲ್ಲಿರುವ ದೊರೆತ ಈಸ್ಟ್ ಇಂಡಿಯಾ ಕಂಪನಿ ಕಾಲಕ್ಕೆ ಸಂಬಂಧಿಸಿದ ರೂ.1/- ಮುಖಬೆಲೆಯ ಸುಮಾರು 50 ಬೆಳ್ಳಿ ನಾಣ್ಯಗಳನ್ನು ನ್ಯಾಯಾಲಯದ ಮೂಲಕ ಹಾಸನ ವಸ್ತುಸಂಗ್ರಹಾಲಯದ ವಶಕ್ಕೆ ಪಡೆಯಲಾಗಿದೆ.

**35. ಇಲಾಖೆಯ ಗ್ರಂಥಾಲಯ:-**

ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ, ಮೈಸೂರು ವತಿಯಿಂದ ಮೈಸೂರಿನ ಅರಮನೆಯ ಆವರಣದಲ್ಲಿ ಒಂದು ಗ್ರಂಥಾಲಯವಿದ್ದು, ಈ ಗ್ರಂಥಾಲಯದಲ್ಲಿ ಪುರಾತತ್ವ, ಇತಿಹಾಸ ವಿಷಯಗಳ ಕುರಿತಂತೆ ಒಂದು ಪುಸ್ತಕ ಬಂಡಾರವಿದ್ದು, ಸುಮಾರು 18398 ಪುಸ್ತಕಗಳನ್ನು ಸಂಗ್ರಹಿಸಲಾಗಿದೆ. ಈ ಗ್ರಂಥಾಲಯಕ್ಕೆ ಬರುವ ವಿದ್ವಾಂಸರಿಗೆ, ಸಂಶೋಧಕರಿಗೆ ಮತ್ತು ಸಾರ್ವಜನಿಕರಿಗೆ ಮುಕ್ತ ಪ್ರವೇಶವಿದೆ. ಆಸಕ್ತರು ಇದರ ಉಪಯೋಗವನ್ನು ಪಡೆಯುತ್ತಿದ್ದಾರೆ.

**36. 2016-17ನೇ ಸಾಲಿನಲ್ಲಿ ವಿಧಾನಸಭೆ/ ವಿಧಾನ ಪರಿಷತ್/ ಭರವಸೆ/ ಲೋಕಸಭಾ ಪ್ರಶ್ನೆ ಇವುಗಳಿಗೆ ಸಂಬಂಧಿಸಿದ ವಿವರಗಳು:**

| ಕ್ರಮ ಸಂ. | ವಿಷಯ | ವಿಧಾನ ಸಭೆ | ವಿಧಾನ ಪರಿಷತ್ | ಗಮನ ಸೆಳೆಯುವ ಸೂಚನೆಗಳು | ಭರವಸೆ | | ಲೋಕಸಭಾ ಪ್ರಶ್ನೆ | ರಾಜ್ಯಸಭೆ |
|---|---|---|---|---|---|---|---|---|
| | | | | | ವಿಧಾನ ಸಭೆ | ವಿಧಾನ ಪರಿಷತ್ | | |
| 1) | ಆಡಳಿತಾತ್ಮಕ ವಿಷಯಗಳು | 13 | 27 | 0 | 0 | 0 | 0 | 0 |
| 2) | ವಸ್ತು ಸಂಗ್ರಹಾಲಯ ಕುರಿತಂತೆ | 4 | 6 | 0 | 0 | 0 | 0 | 0 |
| 3) | ಸಂರಕ್ಷಣಾ ವಿಷಯಗಳು | 5 | 12 | 2 | 16 | 4 | 0 | 2 |
| 4) | ಪರಂಪರೆ ವಿಭಾಗ | 1 | 1 | 0 | 0 | 0 | 0 | 0 |
| 5) | ಆಯವ್ಯಯ ವಿಭಾಗ | 5 | 0 | 0 | 0 | 0 | 0 | 0 |
| | **ಒಟ್ಟು** | **28** | **46** | **2** | **16** | **4** | **0** | **2** |

**37. ಲೆಕ್ಕ ಪರಿಶೋಧನೆಗೆ ಸಂಬಂಧಿಸಿದಂತೆ ಕಛೇರಿವಾರು ಬಾಕಿ ಇರುವ ಕಂಡಿಕೆಗಳ ವರದಿ :**

ಈ ಇಲಾಖೆಯಲ್ಲಿ ಪ್ರಸ್ತುತ **30 ಆಡಿಟ್** ಪ್ಯಾರಾಗಳು ಬಾಕಿ ಇವೆ. ಈ ಆಡಿಟ್ ಪ್ಯಾರಾಗಳಿಗೆ ಕಂಡಿಕೆವಾರು ಉತ್ತರವನ್ನು ನೀಡಲಾಗಿದೆ. 2015–16ನೇ ಸಾಲಿನವರೆಗೆ ಇಲಾಖೆಯ ಆಡಿಟ್ ಆಗಿರುತ್ತದೆ.

**38.** **ಇಲಾಖೆಯಲ್ಲಿ ಅಧಿಕಾರಿ ಹಾಗೂ ಸಿಬ್ಬಂದಿಗಳು ಪಡೆದ ತರಭೇತಿಗಳ ವಿವರಗಳು :**

ಈ ಇಲಾಖೆಯ ಲಿಪಿಕ ವರ್ಗದವರಿಗೆ 2016–17ನೇ ಸಾಲಿನ ತರಭೇತಿಯ ವಿವರಗಳು ಇಂತಿವೆ,

| ಕ್ರ.ಸಂ. | ತರಬೇತಿ ವಿಷಯ ಮತ್ತು ಸ್ಥಳ ಮತ್ತು ದಿನಾಂಕ | ನಿಯೋಜಿಸಿರುವ ಅಧಿಕಾರಿಗಳ ಸಂಖ್ಯೆ | ನಿಯೋಜಿಸಿರುವ ಸಿಬ್ಬಂದಿಗಳ ಸಂಖ್ಯೆ |
|---|---|---|---|
| 1) | ಹೆಚ್.ಆರ್. ಎಂ .ಎಸ್. ತರಬೇತಿ ಬೆಂಗಳೂರು ದಿನಾಂಕ 21.4.2016 | 2 | 1 (ತಾಂತ್ರಿಕೇತರ) |
| 2) | ಬೆಂಗಳೂರಿನಲ್ಲಿ ನಡೆದ ಖಟಟಞಖೀಾ ಖಿಡಿಚಿಜಿಜಿಞಖಿಇಞಟಿರ ಚಿ ಖಟಿಜಞಚಿಟಿ ಅಣಞಣಣಾಡಿಚಿಟ ಘಾಜಚಿಟಣ಻ – ದಿನಾಂಕ 20.6.2016 ಣ೦ 21.6.2016 | 4 | 9 (ತಾಂತ್ರಿಕ) |
| 3) | ಕಡತವಿಲೇವಾರಿ ಅಂಕಿ ಅಂಶಗಳನ್ನು ವೆಬ್ ಸೈಟ್‌ನಲ್ಲಿ ದಾಖಲಿಸುವ ಅಪ್‌ಲೋಡ್ ಮಾಡಲು ತರಬೇತಿ ಕುರಿತು. | 4 | 0 |
| 4) | ಹೆಚ್.ಆರ್.ಎಂ.ಎಸ್.0.2 ಆವೃತ್ತಿ ಕುರಿತು ತಿಳುವಳಿಕೆ ನೀಡುವ ತರಬೇತಿ ಬೆಂಗಳೂರು. | 0 | 2 |
| 5) | Gender Sensitisation and Gender Budget Training (Fiscal Policy Institute, Kengeri, Bangalore) dt. 5.5.2016 to 7.5.2016) | 1 | 1 |
| 6) | Khajane-2 Training. (Mysore) 5.07.2016 & 07.07.2016 ಉಪನಿರ್ದೇಶಕರ ಕಛೇರಿ, ಜಿಲ್ಲಾ ಖಜಾನೆ, ಮೈಸೂರು. | 0 | 2 |
| 7) | ಪತ್ರ ನಿರ್ವಹಣಾ ವ್ಯವಸ್ಥೆ (LMS), ಕಡತ ನಿರ್ವಹಣಾ ವ್ಯವಸ್ಥೆ (FMS), ನ್ಯಾಯಾಲಯ ವಿಷಯಗಳ ನಿರ್ವಹಣಾ ವ್ಯವಸ್ಥೆ (CMS) ಕುರಿತು ತರಬೇತಿ 02.05.2016 ರಿಂದ 03.05.2016 | 0 | 3 (ತಾಂತ್ರಿಕೇತರ) |
| 8) | ಬಿಲ್ಲುಗಳ ತಯಾರಿಕೆ ಕುರಿತು ತರಬೇತಿ, ಮೈಸೂರು ದಿನಾಂಕ 05.05.2016 ರಿಂದ 07.05.2016 | 0 | 2 (ತಾಂತ್ರಿಕೇತರ) |
| 9) | ನಿವೃತ್ತಿ ವೇತನ ಮತ್ತು ಪಿಂಚಣಿ ವಿಷಯಗಳು ದಿನಾಂಕ 11.05.2016 ರಿಂದ 13.05.2016 | 0 | 2 (ತಾಂತ್ರಿಕೇತರ) |
| 10) | ಸೇವಾ ಷರತ್ತುಗಳು ಮತ್ತು ವೇತನ ನಿಗಧಿ 20.5.2016 ರಿಂದ 23.05.2016 | 0 | 2 (ತಾಂತ್ರಿಕೇತರ) |
| | **ಒಟ್ಟು** | **11** | **24** |

**39. ಮಾಹಿತಿ ಹಕ್ಕು ಅಧಿನಿಯಮ :**

ಆಯುಕ್ತರ ಕಛೇರಿಯಲ್ಲಿ ಒಟ್ಟು 74 ಅರ್ಜಿಗಳನ್ನು ಸ್ವೀಕರಿಸಿದ್ದು, ಅದಕ್ಕೆ ಉತ್ತರಿಸಲಾಗಿದೆ. ಇಲಾಖೆಯ ಅಧೀನ ಕಛೇರಿಗಳಲ್ಲಿ ಒಟ್ಟು 48 ಅರ್ಜಿಗಳು ಸ್ವೀಕೃತಗೊಂಡು ಅದಕ್ಕೆ ಉತ್ತರವನ್ನು ನೀಡಲಾಗಿರುತ್ತದೆ.

**40. ನಿವೃತ್ತಿ :**

2016–17ನೇ ಸಾಲಿನಲ್ಲಿ ಗ್ರೂಪ್ ಸಿ –3 ಗ್ರೂಪ್ 'ಡಿ' –9 ಜನ ಸೇರಿದಂತೆ ಒಟ್ಟಾರೆ 12 ಜನ ವಯೋಮಾನ ನಿವೃತ್ತಿಯನ್ನು ಹೊಂದಿರುತ್ತಾರೆ.

**41. ಹುದ್ದೆ ನೇಮಕಾತಿ:**

ಪ್ರಥಮ ದರ್ಜೆ ಸಹಾಯಕರ ಎರಡು ಹುದ್ದೆ ಕೆ.ಪಿ.ಎಸ್.ಸಿ ಮೂಲಕ ನೇರ ನೇಮಕಾತಿ ಮಾಡಲಾಗಿದೆ.

**42. ನ್ಯಾಯಾಲಯದ ಪ್ರಕರಣಗಳ ವಿವರಗಳು:–**

| ಕ್ರ.ಸಂ | ನ್ಯಾಯಾಲಯದ ಪ್ರಕರಣಗಳು | ಒಟ್ಟು ಪ್ರಕರಣ | ಇತ್ಯರ್ಥವಾಗಿರುವ ಪ್ರಕರಣಗಳು | ಇತ್ಯರ್ಥ ಆಗಬೇಕಾದ ಪ್ರಕರಣಗಳು |
|---|---|---|---|---|
| 1 | ಸರ್ವೋಚ್ಚ ನ್ಯಾಯಾಲಯ, ನವದೆಹಲಿ (ಸುಪ್ರೀಮ್ ಕೋರ್ಟ್) | 01 | – | 01 |
| 2 | ಕರ್ನಾಟಕ ಉಚ್ಚ ನ್ಯಾಯಾಲಯ, ಬೆಂಗಳೂರು, ಕಲಬುಗಿ, ಧಾರವಾಡ (ಹೈಕೋರ್ಟ್) | 68 | 01 | 67 |
| 3 | ತಾಲ್ಲೂಕು ಮತ್ತು ಜಿಲ್ಲಾ ನ್ಯಾಯಾಲಯ | 04 | – | 04 |
| 4 | ಜಿಲ್ಲಾಧಿಕಾರಿಯವರ ನ್ಯಾಯಾಲಯ | 01 | – | 01 |
| 5 | ಕರ್ನಾಟಕ ಆಡಳಿತ ನ್ಯಾಯಮಂಡಳಿ, ಬೆಂಗಳೂರು | 03 | – | 03 |
| | **ಒಟ್ಟು** | **77** | **01** | **76** |

**43. ಪಿನಾಕಿನ್ ಆಪ್ :**

ಬೆಂಗಳೂರು ಸರ್ಕಾರಿ ವಸ್ತುಸಂಗ್ರಹಾಲಯಕ್ಕೆ ಭೇಟಿ ನೀಡುವ ವೀಕ್ಷಕರಿಗೆ ಸಂಗ್ರಹಾಲಯದಲ್ಲಿ ಪ್ರದರ್ಶಿಸಿರುವ ಪುರಾತತ್ವ ಅವಶೇಷಗಳ ಇತಿಹಾಸವನ್ನು 'ಪಿನಾಕಿನ್' ಆಪ್ (Pinakin App) ಮುಖಾಂತರ ಸಾರ್ವಜನಿಕರು ಮಾಹಿತಿಯನ್ನು ಪಡೆಯಬಹುದಾಗಿರುತ್ತದೆ.

ಈ ರೀತಿ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಕಾರ್ಯಚಟುವಟಿಕೆಗಳು ಮುಂದುವರಿಯುತ್ತಿವೆ.

**ಡಾ: ಎನ್. ಮಂಜುಳ** ಭಾ.ಆ.ಸೇ.,
ಆಯುಕ್ತರು
ಪುರಾತತ್ವ, ಸಂಗ್ರಹಾಲಯಗಳು ಮತ್ತು
ಪರಂಪರೆ ಇಲಾಖೆ, ಮೈಸೂರು